ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು.

ಶಾಸನಬದ್ಧ ಸಹಕಾರಿ ಸಂಸ್ಥೆ

ಸೌಹಾರ್ದ ಸಹಕಾರಿಗಳ ನಡೆ – ಗುಣಮಟ್ಟದ ಕಡೆ

ಯುವ ಸಹಕಾರಿಗಳ ಮಾರ್ಗದರ್ಶಿ

ಸ್ವಾಯತ್ತತೆ, ಸ್ವಯಂ ಆಡಳಿತ ಹಾಗೂ ಸ್ವಯಂ ನಿಯಂತ್ರಣವನ್ನು ಧ್ಯೇಯವಾಗಿರಿಸಿಕೊಂಡಿರುವ ಈ ಸೌಹಾರ್ದ ಸಹಕಾರಿ ಕ್ಷೇತ್ರಕ್ಕೆ ಆದರದ ಸ್ವಾಗತ ಕೋರುತ್ತೇವೆ.

ಸೌಹಾರ್ದ ಸಹಕಾರಿ

ರಜತ ಮಹೋತ್ಸವ 2025

2025

ಅಂತರರಾಷ್ಟ್ರೀಯ ಸಹಕಾರ ವರ್ಷ

ಧ್ಯೇಯ: "ಸಹಕಾರ ಸಂಸ್ಥೆಗಳ ಮೂಲಕ ಉತ್ತಮ ಜಗತ್ತನ್ನು ನಿರ್ಮಿಸಲು ಸಾಧ್ಯ"

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಧ್ಯೇಯ, ದೃಷ್ಟಿ ಹಾಗೂ ಮೌಲ್ಯಗಳು

ಧ್ಯೇಯ : ಸ್ವಾಯತ್ತತೆ, ಸ್ವಯಂ ಆಡಳಿತ, ಸ್ವಯಂ ನಿಯಂತ್ರಣದ ಜೊತೆಗೆ ವೃತ್ತಿಪರ, ಪಾರದರ್ಶಕ ಹಾಗೂ ಉತ್ತರದಾಯಿತ್ವದ ಸೌಹಾರ್ದ ಸಹಕಾರಿ ವ್ಯವಸ್ಥೆಯ ನಿರ್ಮಾಣ.

ದೃಷ್ಟಿ : ಸ್ವಾಯತ್ತ, ಸಾಮಾಜಿಕ ಬದ್ಧತೆ, ಸಕಾರಾತ್ಮಕ ಚಿಂತನೆ, ಅಭಿವೃದ್ಧಿಪರ ವಿಶ್ವಮಾದರಿ ಸಹಕಾರಿ ಸಂಸ್ಥೆಯಾಗಿ ಕಾರ್ಯನಿರ್ವಹಿಸುವುದು.

ಮೌಲ್ಯಗಳು : ಜ್ಞಾನ, ಸೇವೆ, ಬದ್ಧತೆ, ಭಾಗವಹಿಸುವಿಕೆ, ಉತ್ತದಾಯಿತ್ವ.

Karnataka State Souharda Federal Vision , Mission and Values

Vision : Our vision is to emerge as world class model Cooperative by our Statutory, educational, training, research and development activities.

Mission : Our mission is to contribute to build a strong cooperative system which works on Autonomous, Professional, Transparent , Accountable & Economic viability.

Values : Our values are : Service - Knowledge- commitment- involvement & Accountability

ಪರಿವಿಡಿ

	ಪುಟಸಂಖ್ಯೆ
1. ಮೊದಲ ಮಾತು	4–4
2. Cooperatives in Global Scenario	5–11
3. ROLE OF YOUTH IN COOPERATIVE MOVEMENT	12–14
4. KSSFCL Activies for involvement of youths in cooperative movement	15-15
5. ಸಹಕಾರ ಕ್ಷೇತ್ರದ – ಪರಿಚಯ	16–22
6. ಆಡಳಿತ ಮಂಡಳಿ ಹಾಗೂ ಅದರ ಪ್ರಕಾರ್ಯಗಳು	23–25
7. ಸೌಹಾರ್ದ ಕಾಯ್ದೆಯ ಮಾರ್ಗದರ್ಶಿ	26–29
8. ಹೊಸ ಸೌಹಾರ್ದ ಸಹಕಾರಿಯನ್ನು ಆರಂಭಿಸುವುದು ಹೇಗೆ?	30–31
9. ಕರ್ನಾಟಕ ಸಹಕಾರ ಸಂಘಗಳ ಕಾಯ್ದೆಯಡಿಯ ಸಹಕಾರ ಸಂಘಗಳು/ಬ್ಯಾಂಕುಗಳು ಸೌಹಾರ್ದ ಸಹಕಾರಿಗಳಾಗುವುದು ಹೇಗೆ?	32–33
10. ಯುವ ಸಹಕಾರಿಗಳಿಗೆ ಮಾಹಿತಿ	34–39

ಸಹಕಾರಿ ಸಂಸ್ಥೆಗಳು
ಉತ್ತಮ ರಾಷ್ಟ್ರವನ್ನು
ನಿರ್ಮಾಣ ಮಾಡುತ್ತವೆ
– ವಿಶ್ವ ಸಂಸ್ಥೆ

A Co-operatives Build
a better Nation
-UNO

ಸಹಕಾರದಿಂದ ಸಮೃದ್ಧಿ

ಸಹಕಾರಿ ಸಂಸ್ಥೆಗಳು ಕಷ್ಟ
ಕಾಲದಲ್ಲೂ ಉತ್ತಮವಾಗಿ
ಕಾರ್ಯನಿರ್ವಹಿಸುತ್ತವೆ.
– ಅಂತರರಾಷ್ಟ್ರೀಯ
ಸಹಕಾರಿ ಮೈತ್ರಿ ಸಂಸ್ಥೆ

Co-Operatives work better
even in bad times also
-ICA

–: ಮೊದಲ ಮಾತು :–

ನಮ್ಮ ದೇಶದ 120 ವರುಷಗಳ ಸಹಕಾರ ಚಳುವಳಿಯ ಇತಿಹಾಸದಲ್ಲಿ ಅನೇಕ ಏಳು–ಬೀಳುಗಳನ್ನು ಕಂಡಿದ್ದೇವೆ. ಆದರೆ ಸಾಧಿಸಿದ್ದು ಸಾಕಷ್ಟಿದೆ. ಈ ದೇಶದ ಬಹುತೇಕ ಗ್ರಾಮಗಳನ್ನು ಮತ್ತು 97% ಜನಸಂಖ್ಯೆ ಈ ಕ್ಷೇತ್ರ ವ್ಯಾಪಿಸುವ ಮೂಲಕ ದೇಶದಲ್ಲಿ ಹಸಿರು ಕ್ರಾಂತಿಯ ಹಾಗೂ ಶ್ವೇತ ಕ್ರಾಂತಿಗಳ ಹರಿಕಾರನಾಗಿದೆ. ದೇಶದ ಆಹಾರ ಉತ್ಪಾದನೆ ಹೆಚ್ಚಿಸುವಲ್ಲಿ ಸ್ವಾವಲಂಬನೆಯನ್ನು ಕಂಡುಕೊಳ್ಳಲು ಸಹಕಾರಿಯಾಗಿ ಕಾರ್ಯನಿರ್ವಹಿಸಿದೆ. ಸಹಕಾರಿ ಸಂಸ್ಥೆಗಳು ಉತ್ತಮ ಆರ್ಥಿಕ ಸಂಘಟನೆಗಳಾಗಿ ಹೊರಹೊಮ್ಮಿವೆ. ಜನರ ಜೀವನ ಪದ್ಧತಿಯಾಗಿ ಬೆಳೆದಿದೆ. ದೇಶದ ಅರ್ಥ ವ್ಯವಸ್ಥೆಯ ಅವಿಭಾಜ್ಯ ಅಂಗವಾಗಿ ಕಾರ್ಯನಿರ್ವಹಿಸುತ್ತಿವೆ. ವಿಶ್ವದ ಅತಿ ದೊಡ್ಡ ಸಹಕಾರಿ ವ್ಯವಸ್ಥೆಯಾಗಿ ವಿಶ್ವಕ್ಕೆ ಮಾದರಿಯಾಗಿದೆ.

ಸಹಕಾರ ರಾಜ್ಯಗಳ ವಿಷಯವಾದ್ದರಿಂದ ಸಹಕಾರ ಚಳುವಳಿಯ ಪ್ರಗತಿಯನ್ನು ಆಗಿಂದಾಗ್ಗೆ ಕೇಂದ್ರ ಸರಕಾರ ಹಾಗೂ ಯೋಜನಾ ಆಯೋಗದವರು ವಿಮರ್ಶೆಮಾಡಿ ಹಲವು ಆಯೋಗಗಳನ್ನು ನೇಮಕ ಮಾಡುತ್ತ ಆಯೋಗಗಳ ಶಿಫಾರಸ್ಸುಗಳನ್ನು ಪರಿಶೀಲಿಸಿ ಸಹಕಾರ ಕ್ಷೇತ್ರದ ಪ್ರಗತಿಗೆ ಪೂರಕವಾಗುವ ಸಲಹೆ ಮಾರ್ಗದರ್ಶನಗಳನ್ನು ಅಳವಡಿಸಿಕೊಂಡು ಕಾರ್ಯನಿರ್ವಹಿಸಲಾಗುತ್ತಿದೆ. ಇತ್ತೀಚಿನ ಅನೇಕ ವೇದಿಕೆಗಳಲ್ಲಿ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಸಹಕಾರ ಕ್ಷೇತ್ರದಲ್ಲಿ ಯುವಜನತೆ ಹೆಚ್ಚು ತೊಡಗಿಸಿಕೊಳ್ಳುವ ಹಾಗೆ ಯುವಜನರಿಗೆ ಸಹಕಾರ ಕ್ಷೇತ್ರದ ಬಗ್ಗೆ ಮಾಹಿತಿಯನ್ನು ಒದಗಿಸುವುದು, ಸಹಕಾರ ಕ್ಷೇತ್ರದ ಕಾರ್ಯಚಟುವಟಿಕೆಗಳ ಮೂಲಕ ಯುವಜನರಿಗೆ ಪ್ರಯೋಜನಗಳ ಬಗ್ಗೆ ಜಾಗೃತಿ ಮೂಡಿಸುವುದು ಅತ್ಯಂತ ಮಹತ್ವದ್ದು ಹಾಗೂ ಆದ್ಯತೆಯ ಮೇಲೆ ನಿರ್ವಹಿಸಬೇಕಾಗಿದೆ ಎಂದು ಅಭಿಪ್ರಾಯ ಪಡಲಾಗಿದೆ.

ಈ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯು ರಾಜ್ಯದ ಯುವಜನರಿಗಾಗಿ ಪ್ರತ್ಯೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತ ಬಂದಿದೆ. ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಯುವ ಜನರ ಜೊತೆಗೆ ಸಹಕಾರ ಕ್ಷೇತ್ರದ ಪ್ರಗತಿಯನ್ನು ವಿವರಿಸಿ ಸಹಕಾರಿ ಕ್ಷೇತ್ರದ ಸಾಧನೆ, ಸವಾಲುಗಳು, ಅವಕಾಶಗಳ ಬಗ್ಗೆ ಸಂಪೂರ್ಣವಾಗಿ ಪರಿಚಯಿಸುವುದರ ಜೊತೆಗೆ ಅವರುಗಳಿಗೆ ಅಗತ್ಯವಿರುವ ಮಾಹಿತಿಗಳನ್ನು ಒದಗಿಸುವ ಉದ್ದೇಶದಿಂದ "ಸಹಕಾರ ಸಂವಾದ" ಎಂಬ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾ ಬರಲಾಗಿದೆ. ಯುವಕರಿಗೆ ಉಪಯೋಗವಾಗುವ ಹಾಗೆ ಸಹಕಾರ ಕ್ಷೇತ್ರದ ಕಾರ್ಯಚಟುವಟಿಕೆಗಳನ್ನು ಸಂಕ್ಷಿಪ್ತವಾಗಿ ಪರಿಚಯಿಸುವ ಅಧ್ಯಯನ ಸಾಹಿತ್ಯವನ್ನು ಸಿದ್ಧಪಡಿಸಲಾಗಿದೆ. ಈ ಸಂವಾದ ಕಾರ್ಯಕ್ರಮದ ಜೊತೆಗೆ ಪ್ರತಿ ವಿಶ್ವವಿದ್ಯಾನಿಲಯ ಹಾಗೂ ಶಾಲಾ ಕಾಲೇಜುಗಳಲ್ಲಿ "ಕ್ಯಾಂಪಸ್ ಕೋ–ಆಪರೇಟಿವ್" ಸಹಕಾರ ಸಂಘಗಳನ್ನು ಪ್ರಾರಂಭಿಸುವಂತೆ ಮನವಿ ಮಾಡಲು ಯೋಚಿಸಲಾಗುತ್ತಿದೆ.

ಸಂಯುಕ್ತ ಸಹಕಾರಿಯು ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ಸಹಭಾಗಿತ್ವದಲ್ಲಿ ಸಹಕಾರ ಮತ್ತು ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಡಿಪ್ಲೋಮಾ (ಡಿಸಿಬಿಎಂ) ಕೋರ್ಸ್ ಪ್ರಾರಂಭಿಸಿದೆ. ಈ ಕೋರ್ಸ್ ಅಧ್ಯಯನಕ್ಕಾಗಿ ಹೆಚ್ಚು ಯುವ ಜನರು ಆಸಕ್ತಿಯಿಂದ ಭಾಗವಹಿಸಿ ಕಾರ್ಯಕ್ರಮಗಳ ಪ್ರಯೋಜನ ಪಡೆಯುವುದರ ಜೊತೆಗೆ ಸಹಕಾರಿ ಸಂಘಗಳಲ್ಲಿ ಸದಸ್ಯತ್ವ ಪಡೆಯುವ ಮೂಲಕ ಸಹಕಾರಿ ಸಂಸ್ಥೆಗಳಲ್ಲಿ ಸದಸ್ಯರಾಗಿ, ಹೊಸ ಸಹಕಾರಿ ಸಂಸ್ಥೆಗಳನ್ನು ಹುಟ್ಟು ಹಾಕುವುದರ ಮೂಲಕ ಸಹಕಾರಿ ನಾಯಕರುಗಳಾಗಿ, ಸಮಾಜದ ಆರ್ಥಿಕ ಅಭಿವೃದ್ಧಿಗೆ ಪೂರಕವಾಗಿ ಸಹಕಾರ ಕ್ಷೇತ್ರದ ಪ್ರಗತಿಯಲ್ಲಿ ಪಾಲುದಾರರಾಗುವಿರೆಂದು ಅಪೇಕ್ಷಿಸುತ್ತೇನೆ.

ಜಿ. ನಂಜನಗೌಡ
ಅಧ್ಯಕ್ಷರು

2. Cooperatives in Global Scenario

(Drops in separation fade away, Drops in cooperation make ocean)

- Dr. S. A Siddanthi

Achievements, Opportunities, Challenges before Cooperatives,

Role of youths in cooperation

Backdrop

- Cooperative movement emerged as third sector due to extreme implications of capitalism and socialism.
- The term cooperation means idea of "living together and working together", which is the product of industrial revolution in England.
- Robert Owen, father of cooperative movement proposed ideals of cooperation in his "Report on the Poor".
- In 1844 group of 28 weavers met in chartlist hall in Rochdale town and established the first consumer cooperative store named as "Rochdale Equitable Pioneers Society" with a initial capital of £ 28 pounds, based on the inspiration of ROBERT OWEN.
- Cooperative is a form of an organization in which members with limited resources can join together and collectively strive to achieve their economic goals.
- The key underlying principles which drive the cooperative model are MUTUAL HELP COLLECTIVE BARGAINING and EACH FOR ALL, ALL FOR EACH.

Basic values

- Self-help
- Self-responsibility
- Democracy
- Equality, equity and solidarity

Principles

- Voluntary and open membership
- Democratic member control
- Member economic participation
- Autonomy and independence

- Education, training and publicity
- Cooperation among cooperatives
- Concern for community

Global Scenario – Achievements

- The cooperative movement brings together over 1 billion people (100 crores) around the world, covering 1.4 million (14 lakhs) cooperatives spread over 100 countries, providing employment to over 100 million (10 crores) people.
- In USA, there are 30,000 cooperatives with 100 million (10 crores) members operating through 73,000 outlets throughout US, where 30% of farmers' products in the US are marketed through 3,400 farmer owned cooperatives.
- In China, there are 80,000 cooperatives with 180 million (18 crores).
- India has the largest cooperative movement with 6,00,000 cooperative societies with 250 million (25 crores) members.
- The key sectors focused by cooperatives across the globe are

Continent	Sectors
Europe	Agriculture, Consumer, Credit & Banking
America	Agriculture, Credit, Consumer utilities
Africa	Agriculture, Credit & Banking, Housing, Dairy, Artisans
Asia-Pacific	Agriculture, Credit & Banking, Dairy, Fishery, Textiles, Health, Artisans

- ICA Global studied 300 successful cooperatives and found reasons for success

  - enlightened members list
  - professionally qualified management
  - ethical governance

- Total revenue of 300 global cooperatives was over 1 trillion USD (Rs. 50 lakh crore).
- World's largest banks are cooperatives (France, Holland and Japan).
- 28 from out of 300 global cooperatives are from Asia-pacific, Japan-14, Australia-3, New Zealand-2, Korea-2, Singapore-21, China-1 and India-4 (IFFCO, AMUL, NAFED, Markfed, AP).
- World over, cooperatives have been existing in a market economy

- Norway, 99% of milk production

- Holland, 95% of Dutch flowers
- Switzerland, 2nd largest cooperative employer
- Israel, world's five largest producers of drip irrigation equipment
- Malaysia, networking of cooperative schools
- Australia, music cooperatives
- Thailand, eco-tourism
- India, dairy and super cooperatives
- China, depends heavily on rural economy through cooperatives

Opportunities

- Cooperatives are the key to empowerment of "Rural poor", right from BIRTH OF BABY in a cooperative hospital, the entire socio-economic fabric of the society is based on philosophy of cooperation – even performing rituals of death.
- Cooperatives have tremendous role in bringing economic development in any economy
- Dairy cooperatives (like Gujarat, Karnataka)
- Irrigation cooperatives (like Maharashtra)
- Technology up gradation (Artisans, bio-fertilizers, agri. Tools, bio-gas, etc)
- Water users cooperative societies (like Karnataka)
- Major areas of interventions
- Cooperative credit
- Cooperative marketing
- Cooperative processing
- Cooperative storage
- Cooperative farming
- Consumer cooperatives
- Housing cooperatives
- Labor and construction cooperatives
- Fishermen cooperatives
- Rural electric cooperatives

- Cooperative hospitals
- Cooperative education institutions

Utility cooperatives

- Such as water, electricity / telecommunication services to its members.

Power crisis

- India 11th largest producer of electrical energy, while India is 6th largest consumer of electrical energy.
- In India, 40 crore people do not have access to electricity.
- The number of villages electrified now are 5,00,000 and around 1,00,000 villages are waiting for electrification.
- It is a good opportunity for cooperatives for achieving the goal of power generation.
- Solar energy cooperatives have their presence in USA, Germany, Srilanka and Indonesia.

- Sydney energy cooperatives (Australia)
- Greater river energy cooperatives (USA)
- Mount pleasant solar cooperatives (USA)
- Wind cooperatives (USA, Germany, Netherland, Denmark)
- World's largest off shore wind farm through cooperatives with 1,00,000 members (Denmark)

Challenges before cooperatives

(Individually we are one drop, togetherly we are an ocean)

- Strengthening of capital base
- Sound financial management
- Creating awareness
- Ethical leadership
- Democratic functioning
- Political intervention
- Accountability
- Effective governance

- Professional management
- Qualitative human resources
- Systems and procedures
- Business diversification
- Training
- Audit

Cooperative movement - Indian Scenario

The Indian cooperative movement has history of 120 years. Cooperative movement in India was started by the British Government by enacting a cooperative Act in the year 1904. This Act was amended in 1912 to widen the scope of the cooperative activities. Then cooperation subject was transferred to states and the movement started to grow fast. The growth of Indian cooperative movement may be classified as,

1. Before Independence up to 1947
2. After Independence After 1947
3. After New Economic policy i.e., liberalization, privatization and globalization in 1991
4. Liberal Act for cooperatives 1991 Souharda Cooperative Era in Karnataka
5. 97 Constitutional Amendment – It is right of every Indian citizen to start a cooperative society.

The Progress of the Indian cooperative movement

Total Number of Cooperatives	- 8,50,000
Membership	- around 290 million
Share capital	- 9.58 Crores
Working capital	- 1,56,016.97 Crores
Rural coverage	- 98%
Fertilizer Distribution	- 98%
Fertilizer production	-35%
Sugar Production	-33.5%
Wheat production	-38%

Cloths production	- 54%
Oil Production	- 49%
Ice-cream production	-45%
Milk sector	-22.00%
Employment	-12.15%

The progress of Souharda Cooperative movement in Karnataka is as follows.

The Souharda Cooperative Act was implemented in Karnataka in the year 2001. Autonomy, Self administration and Self control is the main concept of this movement. The role of Government is very least. No Government funds, no interference in the activities of the Souharda Cooperatives administration. Business freedom is given to these souharda cooperatives.

Progress of Souharda Co-operative movement in Karnataka (as on 31.03.2024)

- Souharda Cooperatives - 6407
- E-Stamping Centers - 1692 Centers
- No of Membership - 72 laths
- Share Capital - 1610 crores
- Deposits -43,704 crores
- Received Loans - 392 crores
- Given Loans - 34,030 crores
- Reserves - 3690 crores
- Working Capital -49,396 crores
- Profits -626 crores
- Employment -75,000

Role of youths in cooperation

- The importance ofstudent's involvement in cooperatives was emphasized by the cooperative planning committee in 1945.
- In order to educate youth in cooperation, several suggestions were made from time to time to State Governments, such as

- Teaching of cooperation may be introduced in the primary and secondary schools through simple lessons in the social study books by NCERT.
- Cooperation should be introduced as on optional subject in BA (economics),

B Com courses, agricultural courses, rural development courses, micro-credit, self-help groups, environmental science

courses, etc. A master degree in cooperation and allied subjects be introduced in all universities with proper placement support in all cooperative organizations.

- Cooperative stores, canteens, credit societies, etc., be organized in schools, colleges and universities to give practical emphasis to the field of cooperation.'
- Cooperation should be included as a subject in public service commission examination.
- In order to popularize the subject of cooperation among university students, a scheme for the organization of debating and essay contests was introduced by NCCT, New Delhi in 1960, has become a very popular event among the universities all over the country. A large number of universities participate with well prepared teams to support and oppose the motion.
- Along with debating competition, a symposium on cooperation is also organized since 1971 by NCCT, New Delhi. The debates, essays competitions and symposia motivated the youths to think about cooperation as a concept and job oriented subject. The debates and symposia are now organized both in Hindi and English at All India level.

The cooperative stores should be organized in the college and universities with membership of both students and staff. Their participation in stores will also provide sense of fellowship, mutual aid and democratic management besides providing stationery, books, etc., at reasonable price. In Japan, all the universities, numbering more than HUNDRED, have such stores, where such stores import books, equipments and other items, being sold to students / members at reasonable price. The price difference between cooperative stores and private shops in Japan ranging between 30 to 40 per cent.

In the present situation in India, where cost of education is consistently rising, organization of cooperative stores in educational institutions should be launched as a movement through the country.

ONE WORD MORE

The wheels of cooperative movement can be strengthened only by active involvement of youth in the day today functioning of cooperatives throughout the country, being built in as part of curriculum. The integration and development of any country is possible through cooperative model, for which youths should take lead in strengthening the cooperative process.

3. ROLE OF YOUTH IN COOPERATIVE MOVEMENT

- Dr. A.R.Srinath Ex. Director, NCUI New Delhi.

In many countries around the world at present, young people are becoming an important part of the cooperative movement. Individually, they are strengthening the membership base of cooperatives, they are also increasingly taking up leadership positions. Collectively, youth based cooperatives are joining the ranks of established cooperative structures in different countries of the world.

Youths are mostly involved in cooperatives, operating in campuses – Universities, Colleges and even Secondary Schools. They run their own cooperatives or join hands with adults in the functioning collectively. But more and more they are also joining community based cooperatives, involving established cooperative structure in the process and opening up new ventures for product innovation.

Youths are actively involved in Consumers Cooperatives inside campuses, which supply them basic commodities attendant to the pursuing of their studies - text books and stationeries supplies, consumer goods, food and accommodation facilities. These cooperatives also provide services, including travel, insurance, training, computer and information technology access etc. In some cases they are also involved in savings and credit. Young cooperatives will continue to play an important role in building the cooperatives movement worldwide in better way. In an competitive economy, individuals exercise limited economic power and sometimes lose it entirely when few enterprises dominates the market. More often than not , they also lose therein social power and the ability to control other aspects of life than make for wholesome living. The situation becomes even worse when the individual has limited means of resources.

In this way, cooperatives are important in forming a cooperatives people-even those of limited means-combine resources establish their own enterprises that will deliver goods and services that satisfied their needs. They own it, hence, they decide how best their interests are served and share the economic benefits derived from a successful enterprise. As well, successful cooperatives distribute their surplus in such a way that other concerns affecting members and their community (e.g.

health, education, environment etc. are addressed. This way people also share the social benefits accruing from the cooperative enterprises.

HOW THE YOUTH CAN BENEFITS FROM COOPERATIVES

When they establish or join consumers cooperatives in the campus, students are able to procure goods and services that are necessary for their daily life at a cost affordable to them. For example:

- Text books and stationery supplies need in their education.
- Basic consumer items needed in daily life inside or outside the campus
- Food needed for their daily substance
- Dormitory or hostel facilities for those needing affordable accommodation
- Health Services.
- Travel and Insurance Services
- Training in and access to computers and Information Technology.

They learn the value of cooperation working with people, practical aspects managing and business, marketing, decision making, concern for the welfare of others, leadership qualities.

India has a strong youth population with more than 50% of its population below the age of 25 and more than 65% below the age of 35 every third person in an Indian city today is youth. Shortly, India is set to become the world's youngest country with 64% of its population in the working age group.

CHALLENGES BEFORE COOPERATIVE MOVEMENT IN YOUTH PARTICIPATION

The cooperative movement in India faces a big challenge to galvanize the Youth so as to user in new leadership which can give a real momentum to the growth of the cooperative movement in the country. The youth can play an important role in strengthening the cooperative movement in the following ways;

DEVELOPING CREATIVE SKILLS:

The Youth can provide creative skills for the growth of cooperative organization,

as they are young and dynamic, burning with new ideas. A cooperative, provides ideal training ground to develop the creativity of youth. Starting a cooperatives, working in it and developing socio-economic activities, all require creativity.

Innovation: : Youth are innovative creatures. They like to experiment and they do not like fixed ideas. While working in cooperatives they can work for the welfare of the market community, responsibility and market dynamics which all require innovation. So, Youth through their innovation develop the functional capabilities of a cooperatives.

Democratic Participation: Cooperatives are purely democratic organization where everyone is free to contribute in his/her unique manner. Youth can play an important role in strengthening equity norms of a cooperatives through non-discriminatory nature of a cooperatives, if they are well sensitized to join a cooperatives.

Entrepreneurial and Managerial Skills: Functioning of a cooperative needs effective leadership. This can be well reflected in sound entrepreneurial and managerial skills. Cooperatives promote good entrepreneurial ideas as well as ability to work for social cause. If youth from cooperatives related to consumer goods, savings and other activities then they can enhance their Entrepreneurial and Managerial Skills

Decision making : Developing the skills for decision making based on consensus is very important for effective functioning of cooperatives. The youth have the skills to develop consensus. This can easily materialize through strong functioning of cooperatives.

Value and Principles: Cooperatives provide a unique blend of ethics and business. They encourage self-help, self-responsibilities, democracy, equity and solidarity. They believe in honesty, openness, social responsibility and caring for others. The value orientation of cooperative encourage youth to develop these values in natural way. A cooperative can be strengthening in such a way through youth participation.

4. KSSFCL Activities for involvement of youths in cooperative movement

1. Organizing interactive programmes in the universities and organizing Campus Cooperatives

We have organized (Samavada) interactive training programmes for youth in Mysore, Bengaluru, Belagavi, Dharawad Kalaburagi Vijayapur, Shimoga, Gadag Universities and this year also we plan to organize Samvada programmes in Bengaluru-2, Tumakuru-1, Vijayapur-1, Central University Kalaburgi -1 and Davanagere-1

As a part of these Samavada programmes the KSSFCL if Organizing promoters meeting to form Campus Cooperatives to form a cooperative societies in the university. This Campus Cooperative will involve Professors lectures (Academic staff). Administrative staff and students of the university.

2. DCBM- Diploma in Cooperative and Banking Management course for employees of the Souharda Sooperatives and Youths in general:

The Souharda Federal cooperative has started DCBM course for involving cooperative sector from the year 2019 since then Karnataka State Souharda Federal Cooperative Ltd on its own conducted 4 batch of DCBM course covering 1376 and Thereafter in 2023 a revised DCBM course in collaboration with KSRDPUR has been stared. This is one year Diploma Course 1st Batch has been already completed covering 631 youths and in 2nd batch there are294 youths taken of this course.

3. Member Education Programe and Youth involment: KSSFCL is organizing member education program in all the 6300 Souharda Cooperatives of Karnataka where in the importance of youth participation.

5. ಸಹಕಾರ ಕ್ಷೇತ್ರದ – ಪರಿಚಯ

- ಸಹಕಾರ ಅರ್ಥ ವಿವರಣೆ : ಸಹಕಾರಿಯ ಅರ್ಥ ವಿವರಣೆ, ಸಹಕಾರ ತತ್ವಗಳು.
- ವಿದೇಶದಲ್ಲಿ ಸಹಕಾರ ಚಳುವಳಿಯ ಹುಟ್ಟು.
- ಸಹಕಾರ ಚಳುವಳಿ ನಡೆದು ಬಂದ ದಾರಿ.

ಸಹಕಾರ

ಸಹಕಾರ ಎಂದರೆ ಸಾಮಾನ್ಯ ಅರ್ಥದಲ್ಲಿ ಒಂದು ಕೆಲಸದಲ್ಲಿ ಒಬ್ಬರಿಗೆ ಇನ್ನೊಬ್ಬರು ನೆರವು ನೀಡುವುದು, ಕೂಡಿ ಕೆಲಸ ಮಾಡುವುದು. ಸಹಕಾರ ಶಬ್ಧಕ್ಕೆ ಹೊಸ ಅರ್ಥ ವಿವರಣೆ ಅಗತ್ಯವಿಲ್ಲ. ಮಾನವ ಹುಟ್ಟಿನಿಂದಲೇ ಸಹಕಾರ ಮನೋಭಾವವನ್ನು ಮೈಗೂಡಿಸಿಕೊಳ್ಳುತ್ತಾನೆ. ಇಲ್ಲದಿದ್ದರೆ ಬದುಕುವುದೇ ಕಷ್ಟ. ಹೀಗಾಗಿ ಮಾನವನ ದಿನನಿತ್ಯದ ಪ್ರತಿಯೊಂದು ಕಾರ್ಯಗಳಲ್ಲಿ ಇನ್ನೊಬ್ಬರ ಸಹಕಾರವಿದ್ದೇ ಇರುತ್ತದೆ. ಆದ್ದರಿಂದಲೇ ಮಾನವ ಸಂಘಜೀವಿ ಎಂದು ಹೇಳಲಾಗುತ್ತದೆ.

ಸಹಕಾರಿ/ಸಹಕಾರಿ ಸಂಘ

ಸಹಕಾರ / ಸಹಕಾರಿ ಸಂಘ ಎಂದರೆ ಕೆಲವು ಸಮಾನ ಮನಸ್ಕರು, ಸಮಾನತೆಯ ತಳಹದಿಯ ಮೇಲೆ ಒಂದು ಸಾಮಾನ್ಯ ಆರ್ಥಿಕ ಚಟುವಟಿಕೆಯ ಕಾರ್ಯ ಸಾಧನೆಗಾಗಿ ಒಂದುಗೂಡಿ ಸೌಹಾರ್ದ ಸಹಕಾರಿ ಕಾಯ್ದೆ ಅಥವಾ ಸಹಕಾರಿ ಕಾಯ್ದೆ ನಿಯಮಾನುಸಾರ ಕಾರ್ಯನಿರ್ವಹಿಸುವುದೇ ಒಂದು ಸಹಕಾರಿ ಅಥವಾ ಸಹಕಾರ ಸಂಘ ಎಂದು ಕ ರೆಯಲಾಗುತ್ತದೆ.

ಸಹಕಾರಿ ತತ್ವಗಳು

"ತಾನು ಎಲ್ಲರಿಗಾಗಿ ಎಲ್ಲರೂ ತನಗಾಗಿ" ಎಂಬುದು ಸಹಕಾರದ ಮೂಲತತ್ವ. 1844ರಲ್ಲಿ ಸಮಾಜವಾದಿ ನಾಯಕ ರಾಬರ್ಟ್ ಓವೆನ್ ನೇತೃತ್ವದಲ್ಲಿ ಇಂಗ್ಲೆಂಡ್ ದೇಶದಲ್ಲಿ ರಾಕ್‌ಡೆಲ್ ಅಗ್ರಗಾಮಿಗಳು ಪ್ರಾರಂಭಿಸಿದ ಗ್ರಾಹಕ ಸಹಕಾರ ಚಳುವಳಿ ಹಾಗೂ 18ನೇ ಶತಮಾನದ ಅಂತ್ಯದಲ್ಲಿ ಜರ್ಮನಿ ದೇಶದಲ್ಲಿ ರೈಫಿಸನ್ ನೇತೃತ್ವದಲ್ಲಿ ಪ್ರಾರಂಭಗೊಂಡ ಕೃಷಿ ಆಧಾರಿತ ಸಹಕಾರ ಚಳುವಳಿಗಳ ಅನುಭವದ ಆಧಾರದ ಮೇಲೆ ಕೆಲವು ಸಹಕಾರಿ ಮೌಲ್ಯಗಳನ್ನು ಸಹಕಾರಿ ತತ್ವಗಳನ್ನಾಗಿ ಸಹಕಾರಿ ನಾಯಕರು ನಿರೂಪಿಸಿದರು. ಕ್ರಮೇಣ ಸಹಕಾರ ಒಂದು ಅರ್ಥ ವ್ಯವಸ್ಥೆಯಾಗಿ ಹೊರಹೊಮ್ಮಿದ ನಂತರ 1965ರಲ್ಲಿ ಅಂತರರಾಷ್ಟ್ರೀಯ ಸಹಕಾರಿ ಮೈತ್ರಿ ಕೂಟದವರು ಭಾರತದ ಡಾ. ಡಿ. ಜಿ. ಕರ್ವೆಯವರ ನೇತೃತ್ವದಲ್ಲಿ ಈ ತತ್ವಗಳನ್ನು ಅಧ್ಯಯನ ಮಾಡಿ ನಂತರ ಇಡೀ ವಿಶ್ವಕ್ಕೆ ಅನುಕರಣೆಯಾಗುವಂತೆ ಆರು ಸಹಕಾರಿ ತತ್ವಗಳನ್ನು ರಚನೆ ಮಾಡಿದರು. 1995ರಲ್ಲಿ ಈ ತತ್ವಗಳ ಪುನರ್ ಅಧ್ಯಯನ ಮಾಡಿ ಕೆಲವು ಮಾರ್ಪಾಡುಗಳನ್ನು ಮಾಡಿ ಸಾಮಾಜಿಕ ಕಳಕಳಿ ಎಂಬ ಹೊಸ ತತ್ವವನ್ನು ಸೇರಿಸಿ 7 ಸಹಕಾರಿ ತತ್ವಗಳನ್ನು ರಚಿಸಲಾಗಿದೆ. ಅವುಗಳೆಂದರೆ,

1. ಮುಕ್ತ ಹಾಗೂ ಸ್ವಯಂ ಪ್ರೇರಿತ ಸದಸ್ಯತ್ವ
2. ಪ್ರಜಾಸತ್ತಾತ್ಮಕ ಸದಸ್ಯರ ಹತೋಟಿ
3. ಆರ್ಥಿಕ ಚಟುವಟಿಕೆಗಳಲ್ಲಿ ಸದಸ್ಯರ ಪಾಲು
4. ಸ್ವಾಯತ್ತತೆ ಮತ್ತು ಸ್ವಾತಂತ್ರ್ಯ
5. ಸಹಕಾರ ಶಿಕ್ಷಣ, ತರಬೇತಿ ಮತ್ತು ಪ್ರಚಾರ
6. ಸಹಕಾರಿಗಳಲ್ಲಿ ಪರಸ್ಪರ ಕ್ರಿಯಾತ್ಮಕ ಸಹಕಾರ
7. ಸಾಮಾಜಿಕ ಕಳಕಳಿ

ವಿಶ್ವದಾದ್ಯಂತ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಸಹಕಾರಿಗಳ ಕಾರ್ಯಾಚರಣೆಗೆ, ಯಶಸ್ಸಿಗೆ, ಪ್ರಗತಿಗೆ ಈ ತತ್ವಗಳೇ ಅಡಿಪಾಯ. ಎಡವಿದಲ್ಲಿ ಸಹಕಾರ ಕ್ಷೇತ್ರದ ಬೆಳವಣಿಗೆಗೆ ಅವಕಾಶವಾಗುವುದಿಲ್ಲ ಎಂಬುದನ್ನು ಸಹಕಾರಿಗಳು ಗಮನಿಸಬೇಕು.

ವಿದೇಶದಲ್ಲಿ ಸಹಕಾರ ಚಳುವಳಿಯ ಹುಟ್ಟು

ಆಧುನಿಕ ಸಹಕಾರ ಚಳುವಳಿಯ ಉಗಮಕ್ಕೆ ಬ್ರಿಟನ್ ಗ್ರಾಹಕರ ಸಹಕಾರ ಚಳುವಳಿ ನಾಂದಿ ಹಾಡಿದರೆ, ಜರ್ಮನಿ ದೇಶ ಕೃಷಿ ಪತ್ತಿನ ಹಾಗೂ ಪಟ್ಟಣ ಸಹಕಾರ ಸಂಘಗಳಿಗೆ ಭದ್ರ ಬುನಾದಿ ಹಾಕಿತು.

ವಿದೇಶದ ಸಹಕಾರ ಚಳುವಳಿಯ ಅಗ್ರಸ್ಥಾನ ರಾಬರ್ಟ್ ಒವೆನ್ (1771 ರಿಂದ 1858) ಗೆ ಸಲ್ಲುತ್ತದೆ. ಇವರನ್ನು ಸಹಕಾರದ ಪಿತಾಮಹ ಎಂದು ಗುರುತಿಸಲಾಗಿದೆ. ಕೈಗಾರಿಕಾ ಕ್ರಾಂತಿಯಾದ ನಂತರ ಶ್ರೀಮಂತ ಮತ್ತು ಕಾರ್ಮಿಕ ವರ್ಗ ಎಂದು ಎರಡು ಗುಂಪುಗಳಾಗಿ ಕಾರ್ಮಿಕರು ನಿರಂತರ ಶೋಷಣೆಗೆ ಒಳಗಾದಾಗ ರಾಬರ್ಟ್ ಒವೆನ್ ಕಾರ್ಮಿಕರ ಪರವಾಗಿ ಅನೇಕ ಸುಧಾರಣೆಗಳನ್ನು ಮಾಡಿದನು. ಕಾರ್ಮಿಕರಿಗೆ ಕೈತುಂಬ ಸಂಬಳ, ಉತ್ತಮ ಶಿಕ್ಷಣ, ವಸತಿ ಸೌಲಭ್ಯ ಹಾಗೂ ಇತರೆ ಕಾರ್ಮಿಕ ಕಲ್ಯಾಣ ಯೋಜನೆಯನ್ನು ಕಾರ್ಯಗತ ಮಾಡಲು "ಸಹಕಾರ ಗ್ರಾಮ" ಸ್ಥಾಪಿಸಿದ ಕೀರ್ತಿ ರಾಬರ್ಟ್ ಒವೆನ್‌ಗೆ ಸಲ್ಲುತ್ತದೆ. ಮರಣದ ನಂತರ ರಾಬರ್ಟ್ ಒವೆನ್ ಹಾಕಿಕೊಂಡಿದ್ದ ಮಹಾತ್ವಾಕಾಂಕ್ಷೆಯ ಯೋಜನೆ ಸ್ಥಗಿತಗೊಂಡಿತು.

1844ರಲ್ಲಿ ಇಂಗ್ಲೆಂಡಿನ ಗಿರಣಿಯಲ್ಲಿ ಕೆಲಸ ಮಾಡುತ್ತಿದ್ದ 28 ನೇಕಾರರು ರಾಕ್‌ಡೇಲ್ ಪಟ್ಟಣದಲ್ಲಿ ಟೋಡಲೇನ್ ಎಂಬ ಬೀದಿಯಲ್ಲಿ ಆಹಾರ ಪದಾರ್ಥಗಳನ್ನು ಮಾರಾಟ ಮಾಡಲು ಒಂದು ಮಳಿಗೆಯನ್ನು ಪ್ರಾರಂಭಿಸಿದರು. ಸಗಟಾಗಿ ಖರೀದಿ ಮಾಡಿ ಚಿಲ್ಲರೆಯಾಗಿ ಮಾರಾಟ ಮಾಡುವುದರಿಂದ ಕಡಿಮೆ ಬೆಲೆಯಲ್ಲಿ ಮಾರಾಟ ಮಾಡುವುದೇ ಗುರಿಯಾಗಿತ್ತು. ಅದ್ಭುತ ಯಶಸ್ಸನ್ನು ಕಂಡ ಈ ಸಂಸ್ಥೆ ಈಗಲೂ ಕಾರ್ಯನಿರ್ವಹಿಸುತ್ತಿದೆ. ವ್ಯವಹಾರಕ್ಕೆ ಹಾಕಿಕೊಂಡ ನೀತಿಸಂಹಿತೆ ಕಾಲಕ್ರಮೇಣ ತತ್ವಗಳಾಗಿ ಬದಲಾವಣೆಗೊಂಡವು. ಆದ್ದರಿಂದಲೇ 28 ನೇಕಾರರನ್ನು ರಾಕ್‌ಡೆಲ್ ಅಗ್ರಗಾಮಿಗಳೆಂದು ಪರಿಗಣಿಸಲಾಗಿದೆ.

ಪಟ್ಟಣ ಸಹಕಾರ ಸಂಘಗಳು ಮತ್ತು ಕೃಷಿ ಪತ್ತಿನ ಸಹಕಾರಿ ಸಂಘಗಳ ರಚನೆಗೆ ಜರ್ಮನಿ ದೇಶ ಕಾರಣವಾಯಿತು. ಜರ್ಮನಿಯ ರೈಫಿಜಾನ್ ಎಂಬ ಮಹಾಶಯ ಸೇನಾಧಿಕಾರಿಯಾಗಿದ್ದು, ದೃಷ್ಟಿದೋಷದಿಂದ ನಿವೃತ್ತಿಗೊಂಡಾಗ, ಅಪ್ರಾಮಾಣಿಕ ಶ್ರೀಮಂತರು ಬಡ ರೈತರನ್ನು ಹೇಗೆ ಸುಲಿಗೆ ಮಾಡುತ್ತಿದ್ದರು ಎನ್ನುವುದನ್ನು ಕಂಡು ಅವರ ಆರ್ಥಿಕಾಭಿವೃದ್ಧಿಗೆ "ಕ್ರೆಡಿಟ್ ಯೂನಿಯನ್" ಸ್ಥಾಪಿಸಿದನು. ಸದಸ್ಯರನ್ನು ಆರ್ಥಿಕವಾಗಿ ಬಲಪಡಿಸಲು ಸಂಪನ್ಮೂಲ ಕ್ರೋಢೀಕರಣ, ಪರಸ್ಪರ ಸಹಾಯ ಮತ್ತು ಉಳಿತಾಯಕ್ಕೆ ಆದ್ಯತೆ ನೀಡಿದನು. ನೀಡುವ ಸಾಲಕ್ಕೆ ಸರಳ ಬಡ್ಡಿ ಮತ್ತು ಮರುಪಾವತಿ ಸಾಲಗಾರನಿಗೆ ಹೊರೆಯಾಗದ ರೀತಿಯಲ್ಲಿ 6 ತಿಂಗಳಿನಿಂದ 5 ವರ್ಷಗಳವರೆಗೆ ಅವಧಿ ವಿಸ್ತರಿಸಬಹುದಾಗಿತ್ತು. ರೈಫಿಜಾನ್ ದೃಷ್ಟಿದೋಷ ಸಹಕಾರ ಚಳುವಳಿಯ ಆರಂಭಕ್ಕೆ ಒಂದು ವರದಾನವಾಯಿತು.

1850 ರಲ್ಲಿ ಹರ್ಮನ್ ಶೂಲ್ಸ್ (Herman Schultze) ಎಂಬ ಮಹನೀಯ ಜರ್ಮನಿಯ ಡಿಲಿಟ್ಸ್ ಎಂಬ ಪಟ್ಟಣದಲ್ಲಿ ಬಡವರ್ಗಕ್ಕೆ ಸೇರಿದ ವ್ಯಾಪಾರಿಗಳು ಮತ್ತು ಮಧ್ಯಮ ವರ್ಗದ ಆರ್ಥಿಕ ಸ್ಥಿತಿಗತಿಗಳನ್ನು ಸುಧಾರಿಸಲು ಸಹಕಾರ ಸಂಘವನ್ನು ಸ್ಥಾಪಿಸಿದನು. ವಿಶ್ವದಲ್ಲಿ ಪಟ್ಟಣ ಬ್ಯಾಂಕುಗಳ ರಚನೆಗೆ ಈ ಸಂಘಗಳೇ ಕಾರಣವಾದುವು.

ಭಾರತದಲ್ಲಿ ಸಹಕಾರಿ ಚಳುವಳಿ ನಡೆದು ಬಂದ ದಾರಿ

ಸಹಕಾರಿ ಚಳುವಳಿ ನಡೆದು ಬಂದ ದಾರಿಯನ್ನು 5 ವಿಧವಾಗಿ ವಿಂಗಡಿಸಬಹುದು.

01. ಸ್ವಾತಂತ್ರ್ಯ ಪೂರ್ವ
02. ಸ್ವಾತಂತ್ರ್ಯ ನಂತರ
03. ಹೊಸ ಆರ್ಥಿಕ ನೀತಿ ಜಾರಿ ನಂತರ
04. ಸೌಹಾರ್ದ ಸಹಕಾರಿ ಯುಗ
05. ಭಾರತ ಸಂವಿಧಾನದಲ್ಲಿ ಸಹಕಾರಕ್ಕೆ ಸ್ಥಾನ
06. ಕೇಂದ್ರದಲ್ಲಿ ಸಹಕಾರ ಸಚಿವಾಲಯ ಆರಂಭದ ನಂತರ

01. ಸ್ವಾತಂತ್ರ್ಯಾ ಪೂರ್ವ

ರೈತರ ಆರ್ಥಿಕ ಸಂಕಷ್ಟಗಳ ಪರಿಹಾರಕ್ಕಾಗಿ ಅನೇಕ ಆರ್ಥಿಕ ಸಂಘಟನೆಗಳು ಕಾರ್ಯನಿರ್ವಹಿಸಿದಾಗ್ಯೂ ರೈತರ ಆರ್ಥಿಕ ಸಂಕಷ್ಟಗಳು ನಿವಾರಣೆಯಾಗದೆ ತೊಂದರೆಗೀಡಾಗಿರುವುದನ್ನು ಬ್ರಿಟೀಷ್ ಸರ್ಕಾರ ಗಮನಿಸಿ ರೈತರಿಗೆ ಅವರ ಸಾಲ ಬಾಧೆಯಿಂದ ಮುಕ್ತಿ ನೀಡುವಂತಹ ಯೋಜನೆ ಸಿದ್ಧಪಡಿಸಬೇಕೆಂದು ಫ್ರೆಡರಿಕ್ ನಿಕೋಲ್ಸನ್ ಎಂಬ ಅಧಿಕಾರಿಯನ್ನು ಇಂಗ್ಲೆಂಡ್ ದೇಶಕ್ಕೆ ಕಳುಹಿಸಿ ಸಹಕಾರ ಚಳುವಳಿಯ ಅಧ್ಯಯನ ಮಾಡಿ ವರದಿ ಸಲ್ಲಿಸಲು ಸೂಚಿಸಿದರು. ಫ್ರೆಡರಿಕ್ ನಿಕೋಲ್ಸನ್ ರವರ ವರದಿ ಆಧಾರದ ಮೇಲೆ ಭಾರತದಲ್ಲಿ ಸಹಕಾರ ಚಳುವಳಿಯನ್ನು ಪ್ರಾರಂಭಿಸಲು ಅನುಕೂಲವಾಗುವಂತೆ 1904 ಮಾರ್ಚ್ 25ನೇ ದಿನಾಂಕದಂದು ಅಖಿಲ ಭಾರತ ಸಹಕಾರಿ ಪತ್ತಿನ ಕಾಯ್ದೆಯನ್ನು ಜಾರಿಗೆ ತರಲಾಯಿತು. ಹೀಗಾಗಿ ಭಾರತದಲ್ಲಿ ಸಹಕಾರ ಚಳುವಳಿ ಅಧಿಕೃತವಾಗಿ ಪ್ರಾರಂಭವಾದುದು ಸಹಕಾರ ಕಾನೂನು ಮುಖಾಂತರ. ಭಾರತದ ಪ್ರಥಮ ಕೃಷಿ ಸಹಕಾರ ಸಂಘ ಕರ್ನಾಟಕದ ಅಂದಿನ ಧಾರವಾಡ ಜಿಲ್ಲೆಯ ಗದಗ ತಾಲ್ಲೂಕಿನ ಕಣಗಿನಹಾಳ ಎಂಬ ಗ್ರಾಮದಲ್ಲಿ 1905 ಮೇ 08 ರಂದು ಪ್ರಾರಂಭವಾಯಿತು. ನಂತರ ದೇಶದಾದ್ಯಂತ ಅನೇಕ ಕೃಷಿ ಸಹಕಾರ ಸಂಘಗಳ ಸ್ಥಾಪನೆಯಾಯಿತು. ರೈತರಿಗೆ ಕೃಷಿ ಸಾಲ ನೀಡುವ ಸಹಕಾರಿ ಸಂಸ್ಥೆಗಳು ಕಾರ್ಯಾಚರಣೆ ಪ್ರಾರಂಭಿಸಿದವು. ಆದರೆ ಈ ಸಹಕಾರ ಸಂಘಗಳಿಗೆ ಮರು ಹಣಕಾಸು ನೀಡುವ ಕೇಂದ್ರ ಸಂಸ್ಥೆಯನ್ನು ಪ್ರಾರಂಭಿಸಲು ಅವಕಾಶವಿಲ್ಲದೇ ಇದ್ದ ಪ್ರಯುಕ್ತ ಈ ಸಂಸ್ಥೆಗಳು ಹಣಕಾಸಿನ ಮುಗ್ಗಟ್ಟನ್ನು ಎದುರಿಸಬೇಕಾಯಿತು. 1912ರಲ್ಲಿ ಸಹಕಾರಿ ಕಾಯ್ದೆಯನ್ನು ತಿದ್ದುಪಡಿ ಮಾಡಲಾಯಿತು. ಈ ತಿದ್ದುಪಡಿಯ ನಂತರ ಎಲ್ಲಾ ವಿಧವಾದ ಸಹಕಾರಿ ಸಂಸ್ಥೆಗಳ ಸ್ಥಾಪನೆಗೆ ಅವಕಾಶವಾಗಿ ಸಹಕಾರ ಕ್ಷೇತ್ರ ಬೆಳೆಯಲಾರಂಭಿಸಿತು. ಎಲ್ಲಾ ವಿಧವಾದ ಸಹಕಾರ ಸಂಸ್ಥೆಗಳು ರಾಜ್ಯದಾದ್ಯಂತ ಅಸ್ತಿತ್ವಕ್ಕೆ ಬಂದವು. ಸಹಕಾರ ಕ್ಷೇತ್ರದ ತೊಡಕುಗಳ ನಿವಾರಣೆಗೆ 1919ರಲ್ಲಿ ಪ್ರಾಂತೀಯ ಸಹಕಾರಗಳ ರಚನೆಯ ನಂತರ ಎಲ್ಲಾ ಪ್ರಾಂತ್ಯಗಳಲ್ಲಿ ಪ್ರಾಂತೀಯ ಸಹಕಾರ ಕಾಯ್ದೆಗಳ ರಚನೆಯಾಯಿತು. 1935ರಲ್ಲಿ ಭಾರತೀಯ ರಿಸರ್ವ್ ಬ್ಯಾಂಕಿನ ಸ್ಥಾಪನೆಯಾಯಿತು. ಈ ಅವಧಿಯಲ್ಲಿ ಸಹಕಾರ ಕ್ಷೇತ್ರದಲ್ಲಿ ಹೇಳಿಕೊಳ್ಳುವಂತಹ ಪ್ರಗತಿಯಾಗಲಿಲ್ಲ.

02. ಸ್ವಾತಂತ್ರ್ಯಾನಂತರ

1947ರಲ್ಲಿ ಭಾರತಕ್ಕೆ ಸ್ವಾತಂತ್ರ. 1950ರಲ್ಲಿ ಗಣರಾಜ್ಯ ಸ್ಥಾಪನೆ. ನೂತನ ಸಂವಿಧಾನದಲ್ಲಿ ಸಹಕಾರ ರಾಜ್ಯಗಳ ವಿಷಯ. ಸ್ವತಂತ್ರ ಭಾರತದ ನೂತನ ಸರಕಾರ ಅಸ್ತಿತ್ವಕ್ಕೆ. ಪ್ರಥಮ ಪ್ರಧಾನಿ ದಿ.ಜವಾಹರಲಾಲ ನೆಹರೂರವರ ನೇತೃತ್ವದಲ್ಲಿ ಆಡಳಿತ ವಹಿಸಿಕೊಂಡ ನಂತರ ಸಹಕಾರ ಚಳುವಳಿಯ ಪ್ರಗತಿ ವಿಮರ್ಶೆಗೆ ರಿಸರ್ವ್ ಬ್ಯಾಂಕಿನ ಗವರ್ನರ್ ಶ್ರೀ ಎ.ಡಿ.ಗೊರವಾಲಾ ನೇತೃತ್ವದಲ್ಲಿ "ಅಖಿಲ ಭಾರತ ಪತ್ತು ಪರಿಶೀಲನಾ ಸಮಿತಿ" ನೇಮಕ. ಸುದೀರ್ಘ ಅಧ್ಯಯನ ನಂತರ ವರದಿ. "ಭಾರತದಲ್ಲಿ ಸಹಕಾರ ಚಳುವಳಿ ಯಶಸ್ವಿಯಾಗಲಿಲ್ಲ ಆದರೆ ಯಶಸ್ವಿಯಾಗಲೇಬೇಕು" ಎಂದು ತಿಳಿಸಿ ಸಹಕಾರ ಕ್ಷೇತ್ರವನ್ನು ಬಲಪಡಿಸುವುದಕ್ಕಾಗಿ ಕೆಲವು ಮಹತ್ವದ ಶಿಫಾರಸ್ಸುಗಳನ್ನು ಮಾಡಿದರು. ಪ್ರತಿ ಗ್ರಾಮಕ್ಕೊಂದು ಸಹಕಾರ ಸಂಘ, ಸರಕಾರದ ಪಾಲುಗಾರಿಕೆಗೆ ಶಿಫಾರಸ್ಸು, ಪಂಚವಾರ್ಷಿಕ ಯೋಜನೆಗಳಲ್ಲಿ ಕೃಷಿ ಹಾಗೂ ಸಹಕಾರ ಕ್ಷೇತ್ರದ ಅಭಿವೃದ್ಧಿಗೆ ಪೂರ್ಣ ಪ್ರಮಾಣದ ನೆರವು, ಹಸಿರು ಕ್ರಾಂತಿಯ ಹರಿಕಾರನಾಗಿ ಸಹಕಾರ ಕ್ಷೇತ್ರ, ಆದರೂ ಸಹಕಾರ ಕ್ಷೇತ್ರ ನಿರೀಕ್ಷಿಸಿದ ಪ್ರಗತಿಯನ್ನು ಸಾಧಿಸಲಾಗಲಿಲ್ಲ. 1969ರಲ್ಲಿ ಮತ್ತೆ ರಿಸರ್ವ್ ಬ್ಯಾಂಕಿನ ಡೆಪ್ಯೂಟಿ ಗವರ್ನರ್ ಶ್ರೀ ವೆಂಕಟಪ್ಪಯ್ಯನವರ ನೇತೃತ್ವದಲ್ಲಿ "ಅಖಿಲ ಭಾರತ ಪತ್ತು ಪ್ರಗತಿ ಪರಿಶೀಲನಾ ಸಮಿತಿ" ನೇಮಕ. ಸುದೀರ್ಘ ಅಧ್ಯಯನದ ನಂತರ ವರದಿ. ಇದುವರೆಗಿನ ಪತ್ತು ನೀಡಿಕೆ ರೈತ ಸಮುದಾಯದಲ್ಲಿರುವ ಶೇ.25ರಷ್ಟಿರುವ ದೊಡ್ಡ ರೈತರಿಗೆ ಮಾತ್ರ ತಲುಪಿದೆ. ಶೇ.75ರಷ್ಟಿರುವ ಸಣ್ಣ ಹಾಗೂ ಅತಿ ಸಣ್ಣ ರೈತರಿಗೆ ಸಾಲ ಸೌಲಭ್ಯಗಳು ಲಭ್ಯವಾಗಿರುವುದಿಲ್ಲ. ಹೀಗಾಗಿ ಸಹಕಾರ ಕ್ಷೇತ್ರದಲ್ಲಿ ನಿರೀಕ್ಷಿಸಿದ ಪ್ರಗತಿ ಸಾಧನೆಗೆ ಹಿನ್ನಡೆಯಾಗಿದೆ ಎಂದರು ಹಾಗೂ ಮಹತ್ವದ ಶಿಫಾರಸ್ಸುಗಳನ್ನು ಮಾಡಿದರು. ಸಣ್ಣ ರೈತರಿಗೆ ವ್ಯವಸಾಯಕ್ಕೆ ಅಗತ್ಯವಾದ ಸಾಲ ಸೌಲಭ್ಯಗಳನ್ನು ನೀಡುವುದರ ಜೊತೆಗೆ ವ್ಯವಸಾಯಕ್ಕೆ ಪೂರಕವಾದ ಕಸಬುಗಳನ್ನು ಮಾಡಲು ಆರ್ಥಿಕ ನೆರವು ನೀಡಬೇಕಾದುದು ಅವಶ್ಯ ಎಂದು ಸೂಚಿಸಿದರು. ಇದರ ಪರಿಣಾಮವಾಗಿ ಸಣ್ಣ ಹಾಗೂ ಅತಿಸಣ್ಣ ರೈತರ ಹಾಗೂ ಕೃಷಿ ಕಾರ್ಮಿಕರ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಯಿತು. ಇದರ ಪರಿಣಾಮವಾಗಿ 14 ದೊಡ್ಡ ವಾಣಿಜ್ಯ ಬ್ಯಾಂಕುಗಳನ್ನು 1969ರಲ್ಲಿ ರಾಷ್ಟ್ರೀಕರಣಮಾಡಿ ಹೈನುಗಾರಿಕೆ, ಕೋಳಿ ಸಾಕಾಣಿಕೆ, ಹಂದಿ ಸಾಕಾಣಿಕೆ,

ಜೇನುಸಾಕಾಣಿಕೆ ಮುಂತಾದ ಉಪಕಸುಬುಗಳಿಗೆ ಹೆಚ್ಚಿನ ಆರ್ಥಿಕ ಸಹಾಯ ನೀಡಲು ಆದ್ಯತೆ ನೀಡಲಾಯಿತು. ಹೈನುಗಾರಿಕೆ ಕ್ಷೇತ್ರದ ಅಭಿವೃದ್ಧಿಯಿಂದ ಶ್ವೇತಕ್ರಾಂತಿಯಾಗಿ ರೈತರು ಉಪಕಸುಬುಗಳ ಮೂಲಕ ಆರ್ಥಿಕ ಚಟುವಟಿಕೆಗಳನ್ನು ಹೆಚ್ಚಿಸಿಕೊಂಡು ನೆಮ್ಮದಿಯಾಗಿ ಕೃಷಿ ಚಟುವಟಿಕೆಗಳನ್ನು ಮಾಡಲು ಅವಕಾಶವಾಯಿತು. ದೇಶದ ಆಹಾರ ಉತ್ಪಾದನೆಯಲ್ಲಿ ಸ್ವಾವಲಂಬನೆ ಕಂಡುಕೊಳ್ಳಲು ಸಾಧ್ಯವಾಯಿತು. ಸಹಕಾರ ಕ್ಷೇತ್ರದ ಅಭಿವೃದ್ಧಿಗಾಗಿ ಶಿವರಾಮನ್ ಕಮಿಟಿ ಮತ್ತು ಹಲವಾರು ಸಮಿತಿಗಳು ರಚನೆಗೊಂಡು ಮಾಡಿದ ಅನೇಕ ಶಿಫಾರಸ್ಸುಗಳನ್ನು ಕೇಂದ್ರ ಸರಕಾರ ಹಾಗೂ ರಾಜ್ಯಸರಕಾರಗಳು ಕಾರ್ಯಗತಗೊಳಿಸಿದವು. ಸಹಕಾರ ಕ್ಷೇತ್ರದ ಅಭಿವೃದ್ಧಿಗಾಗಿ ಪಂಚ ವಾರ್ಷಿಕ ಯೋಜನೆಗಳ ಮೂಲಕ ಕೇಂದ್ರ ಹಾಗೂ ರಾಜ್ಯಸರಕಾರಗಳು ಇಷ್ಟೆಲ್ಲ ಕಾರ್ಯಕ್ರಮಗಳನ್ನು ಜಾರಿಗೊಳಿಸಿದಾಗ್ಯೂ ಸಹಕಾರ ಕ್ಷೇತ್ರದ ಪ್ರಗತಿ ನಿರೀಕ್ಷಿಸಿದ ಮಟ್ಟ ತಲುಪಲಿಲ್ಲ.

03. ಹೊಸ ಆರ್ಥಿಕ ನೀತಿ ಘೋಷಣೆ

1991ರಲ್ಲಿ ರಾಷ್ಟ್ರದ ಹಣಕಾಸು ಸಚಿವರಾಗಿದ್ದ ಈಗಿನ ಪ್ರಧಾನಿ ಡಾ.ಮನಮೋಹನಸಿಂಗ್ ರವರು ರಾಷ್ಟ್ರಕ್ಕೆ ಹೊಸ ಆರ್ಥಿಕ ನೀತಿಯನ್ನು ಘೋಷಣೆ ಮಾಡಿದರು. ನಾಗಾಲೋಟದಲ್ಲಿ ಸಾಗುತ್ತಿರುವ ಜಗತ್ತಿನ ಇತರ ರಾಷ್ಟ್ರಗಳ ಜೊತೆಗೆ ಪೈಪೋಟಿ ನೀಡಬೇಕಾದರೆ ಆಹಾರ ಮತ್ತು ಕೈಗಾರಿಕಾ ಉತ್ಪನ್ನಗಳ ಪ್ರಮಾಣ ಹಾಗೂ ಗುಣಮಟ್ಟ ಗಣನೀಯವಾಗಿ ಹೆಚ್ಚಬೇಕಿದೆ. ಅಧಿಕ ಪ್ರಮಾಣದಲ್ಲಿ ಬಂಡವಾಳ ತೊಡಗಿಸಬೇಕಾಗುತ್ತದೆ. ಸರಕಾರವೊಂದರಿಂದಲೇ ಈ ಕೆಲಸ ಸಾಧ್ಯವಾಗುವುದಿಲ್ಲ. ಹೀಗಾಗಿ ದೇಶದ ಅಥವಾ ಹೊರದೇಶದ ಖಾಸಗಿ ಉದ್ದಿಮೆದಾರರು ಉದ್ದಿಮೆಗಳನ್ನು ಪ್ರಾರಂಭಿಸಲು ಮುಕ್ತ ಅವಕಾಶ ಒದಸಗಿಸಬೇಕು. ಹೀಗಾಗಿ "ಖಾಸಗೀಕರಣ, ಜಾಗತೀಕರಣ ಹಾಗೂ ಉದಾರೀಕರಣ" ನೀತಿಯನ್ನು ಘೋಷಿಸಿದರು.

04. ಸೌಹಾರ್ದ ಸಹಕಾರಿ ಯುಗ

ದೇಶದ ಅಭಿವೃದ್ಧಿಯಲ್ಲಿ ಸಹಕಾರಿ ರಂಗದ ಮೂಲಕ ಅಭಿವೃದ್ಧಿಯನ್ನು ಸಾಧಿಸಲು ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳು ಈ ಕ್ಷೇತ್ರಕ್ಕೆ ವಿವಿಧ ಯೋಜನೆಗಳ ಮೂಲಕ ಕೋಟ್ಯಂತರ ರೂಪಾಯಿ ಹಣವನ್ನು, ಶೇರು ಸಬ್ಸಿಡಿ, ಸಹಾಯ ಧನ ಮುಂತಾದ ರೂಪದಲ್ಲಿ ನೀಡಲಾಗಿತ್ತು. ಗ್ರಾಮಕ್ಕೊಂದು ಪಂಚಾಯಿತಿ, ಗ್ರಾಮಕ್ಕೊಂದು ಶಾಲೆ ಹಾಗೂ ಗ್ರಾಮಕ್ಕೊಂದು ಸಹಕಾರ ಸಂಘ ಇವುಗಳು ಸಮುದಾಯ ಅಭಿವೃದ್ಧಿಯ ಮೂರು ಆಧಾರ ಸ್ತಂಭಗಳು ಎಂದೇ ಕರೆಯಲ್ಪಟ್ಟವು. ಅದಕ್ಕಾಗಿಯೇ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಸ್ವಾತಂತ್ರ್ಯಾನಂತರ ಕೋಟ್ಯಾಂತರ ರೂಪಾಯಿ ಹಣವನ್ನು ಸಹಕಾರಿ ಕ್ಷೇತ್ರಕ್ಕೆ ಸುರಿಯಲಾಗಿತ್ತು. ಆದರೂ ಸಹಕಾರಿ ಕ್ಷೇತ್ರ ನಿರೀಕ್ಷಿತ ಯಶಸ್ಸು ಸಾಧಿಸಲಿಲ್ಲ. ಈ ಕುರಿತು ಅನೇಕ ವೇದಿಕೆಗಳ ಮೂಲಕ ಚರ್ಚೆ ಆರಂಭವಾಯಿತು. ಸಹಕಾರಿ ಕ್ಷೇತ್ರ ನಿರೀಕ್ಷಿತ ಯಶಸ್ಸು ಸಾಧಿಸಲಿಲ್ಲ ಹಾಗೂ ಸಹಕಾರಿ ರಂಗ ದಾರಿ ತಪ್ಪಿದೆ ಎಂಬ ಸಹಕಾರಿಗಳ ಕೂಗು ದಿನೇ ದಿನೇ ಹೆಚ್ಚುತ್ತಾ ಹೋಯಿತು. ಇದನ್ನು ಗಮನಿಸಿದ ಕೇಂದ್ರ ಸರ್ಕಾರ 1987ರಲ್ಲಿ ಶ್ರೀ ಅರ್ಧನಾರೀಶ್ವರನ್ ಇವರ ಅಧ್ಯಕ್ಷತೆಯಲ್ಲಿ ಈ ಕುರಿತು ಅಧ್ಯಯನ ನಡೆಸಲು ಸಮಿತಿಯೊಂದನ್ನು ರಚಿಸಿತು. ಈ ಸಮಿತಿಯು ತನ್ನ ವರದಿಯಲ್ಲಿ "ಸರಕಾರದ ಅತಿಯಾದ ಹಸ್ತಕ್ಷೇಪದಿಂದಾಗಿ ದೇಶದಲ್ಲಿ ಸಹಕಾರಿ ಚಳುವಳಿ ವಿಫಲವಾಗಿದೆಯೆಂದು" ಹೇಳಿತು. ಸಹಕಾರ ಚಳುವಳಿ ವಿಫಲವಾದರೂ ಜನಸಾಮಾನ್ಯರು ತಮ್ಮ ಆರ್ಥಿಕ ಏಳ್ಗೆಗಾಗಿ ತಾವೇ ಸ್ವಯಂ ಸ್ಫೂರ್ತಿಯಿಂದ ಭಾಗವಹಿಸುವ ಈ ಆಂದೋಲನ ಯಶಸ್ವಿಯಾಗುವ ಅಗತ್ಯವಿರುವುದನ್ನು ಗುರುತಿಸಿದ ಕೇಂದ್ರ ಯೋಜನಾ ಆಯೋಗ ಸರ್ಕಾರದ ಹಸ್ತಕ್ಷೇಪ ತಡೆಯಬಲ್ಲ ಸದಸ್ಯರಿಗೆ ಹೆಚ್ಚು ಅಧಿಕಾರ ನೀಡುವ ಹಾಗೂ ಅವರ ಸಹಭಾಗಿತ್ವ ಹೆಚ್ಚಿಸುವ ಸಹಕಾರಿ ಸಂಘಗಳಿಗೆ ಚಟುವಟಿಕೆ ನಡೆಸಲು ಮುಕ್ತ ವಾತಾವರಣ ನಿರ್ಮಿಸುವಂತಹ ಮಾದರಿ ಸಹಕಾರಿ ಕಾಯ್ದೆಯನ್ನು ರೂಪಿಸಲು ಚೌಧರಿ ಬ್ರಹ್ಮಪ್ರಕಾಶರ ನೇತೃತ್ವದಲ್ಲಿ ಇನ್ನೊಂದು ಸಮಿತಿಯನ್ನು ನೇಮಿಸಿತು. ಈ ಸಮಿತಿ 1991 ರಲ್ಲಿ ವಿವಿಧ ರಾಜ್ಯಗಳಲ್ಲಿ ಪ್ರಸ್ತುತ ಜಾರಿಯಲ್ಲಿರುವ ಸಹಕಾರಿ ಕಾಯ್ದೆಗಳ ಬಗ್ಗೆ ವಿವರವಾದ ಅಧ್ಯಯನ ನಡೆಸಿ ಒಂದು ಮಾದರಿ ಕಾಯ್ದೆ ರೂಪಿಸಿತು. ಯೋಜನಾ ಆಯೋಗದಿಂದ ಈ ಮಾದರಿ ಸಹಕಾರಿ ಕಾಯ್ದೆಯನ್ನು ಅಳವಡಿಸಿಕೊಳ್ಳಲು ಸಲಹೆ ನೀಡಿ ಎಲ್ಲಾ ರಾಜ್ಯ ಸರ್ಕಾರಗಳಿಗೆ ಕಳುಹಿಸಿತು. ಈ ರೀತಿ ವಿವರವಾದ ಅಧ್ಯಯನದ

ಫಲವಾಗಿ ಯೋಜನಾ ಆಯೋಗದವರು ಕಳುಹಿಸಿದ ಮಾದರಿ ಸಹಕಾರಿ ಕಾಯ್ದೆಯನ್ನು ನಮ್ಮ ರಾಜ್ಯದಲ್ಲಿ ಜಾರಿಗೆ ತರಲಾಯಿತು. ಈ ಕಾಯ್ದೆಯೇ **"ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ – 1997".**

05. ಭಾರತ ಸಂವಿಧಾನದಲ್ಲಿ ಸಹಕಾರಕ್ಕೆ ಸ್ಥಾನ

ಭಾರತ ಸಂವಿಧಾನದಲ್ಲಿ ಸಹಕಾರ ರಾಜ್ಯದ ವಿಷಯ.2012 ಜನವರಿಯಲ್ಲಿ ಭಾರತ ಸಂವಿಧಾನದಲ್ಲಿ ಸಹಕಾರಕ್ಕೆ ವಿಶೇಷ ಮನ್ನಣೆ ದೊರಯಿತು. ಸಹಕಾರಿ ಸಂಸ್ಥೆ ಸ್ಥಾಪಿಸುವುದು, ಬೆಳೆಸುವುದು ಪ್ರಜೆಯ ಸಂವಿಧಾನದಲ್ಲಿ ಬದ್ಧವಾದ ಮೂಲಭೂತ ಹಕ್ಕು ಎಂದು ವಿಧಿತವಾಯಿತು. 2012 ಜನವರಿಯಲ್ಲಿ ಜಾರಿಯಾದ ಸಂವಿಧಾನ 97ನೇ ತಿದ್ದುಪಡಿಯಲ್ಲಿ ಸಹಕಾರ ಕ್ಷೇತ್ರಕ್ಕೆ ಸಂಧಿಸಿದಂತೆ ಮಹತ್ತರವಾದ ಕಾರ್ಯವಿಧಾನಗಳ ವಿರಿವರಣೆಯನ್ನು ನೀಡಲಾಗಿದೆ. ಇದರಿಂದಾಗಿ ಸಹಕಾರಿ ಸಂಘಗಳು ವೃತ್ತಿಪರ, ಉತ್ತಮ ಗುಣಮಟ್ಟದ ಪ್ರಜಾಪ್ರಭುತ್ವ ವ್ಯವಸ್ಥೆಗಳಾಗಿ ಹೊರಹೊಮ್ಮಲು ವಿಪುಲ ಅವಕಾಶ ಒದಗಿ ಬಂದಿದೆ. ಸಂವಿಧಾನ ತಿದ್ದುಪಡಿಯ ಪರಿಣಾಮವಾಗಿ ರಾಜ್ಯ ಕಾಯಿದೆಗಳಲ್ಲಿರುವ ಹಲವಾರು ಮಹತ್ವದ ತೊಡಕು ನಿವಾವರಣೆಯಾಗಿ ಸಹಕಾರಿ ಕ್ಷೇತ್ರಕ್ಕೆ ಬಲ ಬರಬಹುದು. ಸಹಕಾರ ರಂಗಕ್ಕೆ ಇದೊಂದು ಪರಿಣಾಮಕಾರಿ ಹೆಜ್ಜೆ.

06. ಕೇಂದ್ರದಲ್ಲಿ ಸಹಕಾರ ಸಚಿವಾಲಯ ಆರಂಭದ ನಂತರ

ದೇಶದಲ್ಲಿ 8.5 ಲಕ್ಷಗಳಿಗೂ ಹೆಚ್ಚು ಸಹಕಾರ ಸಂಸ್ಥೆಗಳಿವೆ. 40,688 ಕೋಟಿ (4,06,886.8 ಮಿಲಿಯನ್) ಪಾಲು ಬಂಡವಾಳವಿದೆ. 12,53,617 ಕೋಟಿ (1,25,36,174 ಮಿಲಿಯನ್) ದುಡಿಯುವ ಬಂಡವಾಳವಿದೆ. ಕೃಷಿ, ಹೈನುಗಾರಿಕೆ, ಸಕ್ಕರೆ, ಮೀನುಗಾರಿಕೆ, ಕೈಗಾರಿಕೆ, ಆರೋಗ್ಯ ಸಹಕಾರ ಬ್ಯಾಂಕಿಂಗ, ಸಾಮಾನ್ಯ ಕ್ರೆಡಿಟ್ ಸಹಕಾರ ಕಾನೂನುಗಳು ಸಂಬಂಧಿಸಿದ ಕಾನೂನುಗಳು ಮತ್ತು ಸಹಕಾರ ಪರಿಸರ ಮುಂತಾದವುಗಳಲ್ಲಿ ಸಾಕಷ್ಟು ಆಧುನಿಕತೆಯನ್ನು ಅಳವಡಿಸಿ ಪ್ರಗತಿಯನ್ನು ಸಾಧಿಸುವ ಅಗತ್ಯತೆ ಇದ್ದು ಇದಕ್ಕೆಲ್ಲ ವಿಷಯಗಳ ಬಗ್ಗೆ ಆಳವಾದ ಜ್ಞಾನ, ವೃತ್ತಿಪರತೆ ಹಾಗೂ ಆಧುನಿಕ ತಂತ್ರಜ್ಞಾನಗಳನ್ನು ವಿಶ್ವವಿದ್ಯಾಲಯದ ಮೂಲಕ ಅಳವಡಿಸುವ ಕಾರ್ಯ ಪರಿಣಾಮಕಾರಿಯಾಗಿ ನಡೆಯಬೇಕು. ಆದರೆ ಸಹಕಾರ ವಿಷಯಕ್ಕೆ ಪ್ರತ್ಯೇಕ ಸಹಕಾರ ಇಲಾಖೆ ಇರಲಿಲ್ಲ. ಕೇಂದ್ರದಲ್ಲಿ ಸಹಕಾರಿಯ ಇಲಾಖೆಯನ್ನು ಕೃಷಿ ಇಲಾಖೆ ಜೊತೆ ಸೇರಿಸಲಾಗಿತ್ತು. ಹಾಗಾಗಿ ಕೃಷಿ ಇಲಾಖೆಯ ಕೆಲಸ–ಕಾರ್ಯಗಳು ಹೆಚ್ಚಾಗಿರುವುರಿಂದ ಸಹಕಾರಿಯ ಇಲಾಖೆಯ ಕೆಲಸ ಕಾರ್ಯಗಳಿಗೆ ಅವಕಾಶಗಳು ಕಡಿಮೆಯಾಗುತ್ತಿತ್ತು. ಕೇಂದ್ರ ಸಹಕಾರಿ ಕಾರ್ಯಕ್ಷೇತ್ರದ ಚಟುವಟುಕೆಗಳನ್ನು ಗಮನಿಸಿ ಸಹಕಾರಕ್ಕೆ ಪ್ರತ್ಯೇಕ ಸಚಿವಾಲಯ ಅಗತ್ಯತೆ ಎಂಬುದನ್ನು ಮನಗಂಡು ದಿನಾಂಕ 06.07.2021 ರಂದು ಪ್ರತ್ಯೇಕ ಸಹಕಾರ ಸಚಿವಾಲಯವನ್ನು ಪ್ರಾರಂಭಿಸಲಾಯಿತು.

ಸಹಕಾರ ಸಚಿವಾಲಯ ರಚನೆಯ ಉದ್ದೇಶ :

"ಸಹಕಾರ್ ಸೇ ಸಮೃದ್ಧಿ" (ಸಹಕಾರದ ಮೂಲಕ ಸಮೃದ್ಧಿ) ದೃಷ್ಟಿಯನ್ನು ಸಾಕಾರಗೊಳಿಸಲು.

ಸಹಕಾರಿ ಸಂಸ್ಥೆಗಳಿಗೆ "ವ್ಯವಹಾರವನ್ನು ಸುಲಭಗೊಳಿಸಲು" ಪ್ರಕ್ರಿಯೆಗಳನ್ನು ಸುಗಮಗೊಳಿಸಲು ಮತ್ತು ಬಹು–ರಾಜ್ಯ ಸಹಕಾರಿಗಳ (MSCS) ಅಭಿವೃದ್ಧಿಯನ್ನು ಸಕ್ರಿಯಗೊಳಿಸಲು

ದೇಶದಲ್ಲಿ ಸಹಕಾರ ಚಳುವಳಿಗಳನ್ನು ಬಲಪಡಿಸಲು ಪ್ರತ್ಯೇಕ ಆಡಳಿತಾತ್ಮಕ, ಕಾನೂನು ಮತ್ತು ನೀತಿ ಚೌಕಟ್ಟನ್ನು ಒದಗಿಸುವುದು. ತಳಮಟ್ಟದವರೆಗೆ ತಲುಪುವ ನಿಜವಾದ ಜನಾಧಾರಿತ ಚಳುವಳಿಯಾಗಿ ಸಹಕಾರವನ್ನು ಆಳಗೊಳಿಸುವುದು.

ಕೇಂದ್ರದಲ್ಲಿ ಈ ಇಲಾಖೆಯನ್ನು ಕೃಷಿ ಇಲಾಖೆಯ ಜೊತೆಗೆ ಕೂಡಿಸಿದ್ದ ಪರಿಣಾಮವಾಗಿ ಮತ್ತು ಸಹಕಾರ ರಾಜ್ಯಗಳ ವಿಷಯವಾಗಿರುವುದರಿಂದ ರಾಜ್ಯಗಳೆ ಈ ಬಗ್ಗೆ ಆಸಕ್ತಿವಹಿಸಿ ಕಾರ್ಯನಿರ್ವಹಿಸಲಿ ಎಂಬ ಧೋರಣೆಯನ್ನು ಕೇಂದ್ರ ತಳೆಯುತ್ತ ಬಂದು ಸಹಕಾರ ಕ್ಷೇತ್ರದ ಅಹವಾಲುಗಳನ್ನು ಕೇಳುವವರಿಲ್ಲದೆ ಸಹಕಾರ ಕ್ಷೇತ್ರ ಒಂದು ರೀತಿಯಲ್ಲಿ ಅನಾಥವಾದಂತಾಗಿತ್ತು. ಪ್ರಸ್ತುತ ಕೇಂದ್ರ ಸರಕಾರ ಈ ವಿಷಯದ ಬಗ್ಗೆ ಎಚ್ಚತ್ತುಕೊಂಡು ಕೇಂದ್ರದಲ್ಲಿ ಪ್ರತ್ಯೇಕ ಸಚಿವಾಲಯದ ಅಗತ್ಯತೆಯನ್ನು ಮನಗಂಡು ಪ್ರತ್ಯೇಕ ಸಚಿವಾಲಯವನ್ನು ಪ್ರಾರಂಭಿಸಿರುವುದು ಸ್ವಾಗತಾರ್ಹ.

ಈ ಸಹಕಾರ ಸಚಿವಾಲಯ ಪ್ರಾರಂಭವಾಗಿನಿಂದ ದೇಶದ ಸಹಕಾರ ಕ್ಷೇತ್ರಕ್ಕೆ ಹೊಸ ತಿರುವು ಬಂದಂತಹ ಸಹಕಾರ ಕೃಷಿಯೇತರ ಹೊಸ ಸಹಕಾರ ನೀತಿಯನ್ನು ಘೋಷಿಸಲು ಸಿದ್ಧವಾಗಿದೆ. ದೇಶದಲ್ಲಿ ಕೃಷಿ ಪತ್ತಿನ ಸಹಕಾರ ಸಂಘಗಳನ್ನು 90 ಸಾವಿರ ಸಹಕಾರ ಸಂಘಗಳನ್ನು 2 ಲಕ್ಷದವರಿಗೆ ಹೆಚ್ಚಿಸಲು ಹಾಗೂ ಪ್ರತಿ ಗ್ರಾಮಕ್ಕೊಂದರಂತೆ ಪ್ರಾಥಮಿಕ ಸಹಕಾರ ಕೃಷಿ ಪತ್ತಿನ ಸಹಕಾರ ಅಲ್ಲದೆ ದೇಶದಲ್ಲಿ ಸಹಕಾರ ವಿಶ್ವವಿದ್ಯಾಲಯವನ್ನು ಪ್ರಾರಂಭಿಸಲು ಅಗತ್ಯ ಕ್ರಮಗಳನ್ನು ಇಡಲಾಗಿದೆ ಅದರ ಜೊತೆಗೆ ಸಹಕಾರ ಕ್ಷೇತ್ರದ ವಿರಾಟ ಸ್ವರೂಪದ ಬಗ್ಗೆ ಸಹಕಾರಿ ಕಾರ್ಯಕರ್ತರುಗಳು ಸಂಪೂರ್ಣ ಜ್ಞಾನ ಹೊಂದಿರಬೇಕು. ದೇಶದಲ್ಲಿ 8.5 ಲಕ್ಷ ಸಹಕಾರಿಗಳು ರಾಜ್ಯದಲ್ಲಿ 45000 ಸಹಕಾರಿ ಸಂಸ್ಥೆಗಳು ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ 5700 ಕ್ಕೂ ಹೆಚ್ಚು ಸಹಕಾರಿಗಳು ಕಾರ್ಯನಿರ್ವಹಿಸುತ್ತೀವೆ. ಈ ದೇಶದ ಮುಖ್ಯವಾಹಿನಿಯಲ್ಲಿ ಸಹಕಾರಿ ಕ್ಷೇತ್ರವನ್ನು ತೊಡಗಿಸಿಕೊಳ್ಳಲು ಸಾಧ್ಯವಾಗುವಂತೆ ಕೇಂದ್ರ ಸಹಕಾರ ಸಚಿವಾಲಯದ ಮೂಲಕ ದೇಶದಾದ್ಯಂತ ಸಹಕಾರಿಗಳಲ್ಲಿ ಸಂಚಲನ ಮೂಡಿಸುವಂತಹ ಕಾರ್ಯಗಳು ನಡೆಯುತ್ತಿರುವುದನ್ನು ಸಹಕಾರಿಗಳು ಗಮನಿಸಬೇಕು. “ದೇಶಕ್ಕೆ ಒಂದು ಸಹಕಾರ ನೀತಿ, ಸಹಕಾರ ವಿಶ್ವವಿದ್ಯಾಲಯ ಸ್ಥಾಪನೆ, ರಾಷ್ಟ್ರ ಮಟ್ಟದ ಬಹು ರಾಜ್ಯ ಬೀಜಗಳ ಸಹಕಾರ ಸೊಸೈಟಿ, ರಾಷ್ಟ್ರೀಯ ಬಹು ರಾಜ್ಯ ಸಾವಯವ ಸಹಕಾರ ಸಂಘ, ರಾಷ್ಟ್ರೀಯ ಮಟ್ಟದ ಬಹು ರಾಜ್ಯ ಸಹಕಾರ ರಫ್ತು ಸೊಸೈಟಿಗಳ ರಚನೆ” ಮುಂತಾದ ಚಟುವಟಿಕೆಗಳ ಬಗ್ಗೆ ಅಧ್ಯಯನ ಹಾಗೂ ಅವುಗಳಲ್ಲಿ ಸೌಹಾರ್ದ ಸಹಕಾರಿಗಳಿಗೆ ಇರುವ ಅವಕಾಶಗಳ ಅನ್ವೇಷಣೆ ಸೌಹಾರ್ದ ಸಹಕಾರಿಗಳ ಕಾರ್ಯವಾಗಬೇಕು.

ಈ ಸಚಿವಾಲಯದ ನೇತೃತ್ವದಲ್ಲಿ ಹಲವಾರು ಪ್ರಗತಿಪರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಅದರಲ್ಲಿ ಅತ್ಯಂತ ಪ್ರಮುಖವಾಗಿರುವುದು ಕೇಂದ್ರದಲ್ಲಿ “ಸಹಕಾರ ವಿಶ್ವವಿದ್ಯಾಲಯ” ಸ್ಥಾಪಿಸಲು ಮುಂದಾಗಿರುವುದು ಅತ್ಯಂತ ಮಹತ್ವದ್ದಾಗಿದೆ. ಸಹಕಾರಿ ಕ್ಷೇತ್ರದ ಸಾಧನೆಗಳಿಗೆ ಕೆಲವು ಸಂದರ್ಭಗಳಲ್ಲಿ ಹಿನ್ನಡೆ ಎನಿಸುವುದು ಸಹಕಾರಿಗಳಲ್ಲಿ ಹೆಚ್ಚಿನ ಜ್ಞಾನ ಹಾಗೂ ವೃತ್ತಿಪರತೆಯ ಕೊರತೆಗಳನ್ನು ನಿವಾರಿಸಲು ವಿಶ್ವವಿದ್ಯಾಲಯ ನೆರವಾಗಲಿದೆ ಸಹಕಾರ ಕ್ಷೇತ್ರಕ್ಕೆ ಹೆಚ್ಚಿನ ಬಲ ಬಹುದಾಗಿದೆ ಎಂದು ಆಶಿಸಲಾಗಿದೆ. ರಾಜ್ಯದ ಎಲ್ಲಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಗೆ ಕಾಮನ್ ಸಾಫ್ಟ್‌ವೇರ್ ಹಾಗೂ ಕೇಂದ್ರೀಕೃತ ಗಣಕೀಕರಣ ವ್ಯವಸ್ಥೆಯನ್ನು ಕೇಂದ್ರದ ಸಹಕಾರ ಸಚಿವಾಲಯ ರೂಪಿಸಿದೆ.

ಸೌಹಾರ್ದ ಸಹಕಾರ ಕಾಯ್ದೆ 1997

ಸಹಕಾರಿ ಕ್ಷೇತ್ರವನ್ನು ಪುನರ್‌ಸಂಘಟಿಸುವ ಮತ್ತು ಅವುಗಳನ್ನು ವ್ಯವಹಾರಿಕ ಹಾಗೂ ಆರ್ಥಿಕ ಸಂಘಟನೆಗಳೆಂದು ಗುರುತಿಸಿ ಖಾಸಗಿ ವಲಯದ ಸ್ಪರ್ಧೆ ಎದುರಿಸಿ ನಿಲ್ಲುವಂತಾಗಲು ಅನುವು ಮಾಡಿಕೊಡುವುದಕ್ಕಾಗಿ ಕೇಂದ್ರ ಯೋಜನಾ ಆಯೋಗದ ಶಿಫಾರಸ್ಸಿನ ಮೇರೆಗೆ ಕರ್ನಾಟಕದಲ್ಲಿ ಸೌಹಾರ್ದ ಸಹಕಾರಿ ಕಾಯ್ದೆಯನ್ನು ರಚಿಸಿ 2001ರಲ್ಲಿ ಜಾರಿಗೆ ತರಲಾಗಿದೆ. ಜನವರಿ 2025ಕ್ಕೆ ಸೌಹಾರ್ದ ಸಹಕಾರಿ ಕಾಯ್ದೆ ಜಾರಿಗೆ ಬಂದು 25 ವರ್ಷಗಳಾಗಿವೆ. ಈ ಅವಧಿಯಲ್ಲಿ ರಾಜ್ಯದಲ್ಲಿ ಸೌಹಾರ್ದ ಸಹಕಾರಿಗಳ ಸಂಖ್ಯೆ ವೇಗವಾಗಿ ಹೆಚ್ಚುತ್ತಿದ್ದು ಪತ್ತಿನ ಸಹಕಾರಿಗಳು, ಗ್ರಾಹಕರ ಸಹಕಾರಿಗಳು, ಪಟ್ಟಣ ಸಹಕಾರಿ ಬ್ಯಾಂಕ್‌ಗಳು, ವಿವಿದ್ದೋದ್ದೇಶ ಸಹಕಾರಿಗಳು, ಶೈಕ್ಷಣಿಕ ಸಹಕಾರಿಗಳು ಹೀಗೆ ವಿಧವಾದ ಚಟುವಟಿಕೆಗಳನ್ನು ನಡೆಸುವ 6407 ಸೌಹಾರ್ದ ಸಹಕಾರಿಗಳು ನೋಂದಣಿಯಾಗಿ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿವೆ. ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ, ತಾಲ್ಲೂಕು ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಈ ಸೌಹಾರ್ದ ಸಹಕಾರಿಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ.

ರಾಜ್ಯದಲ್ಲಿ ಒಟ್ಟು 6407 ಸೌಹಾರ್ದ ಸಹಕಾರಿಗಳು ಆರ್ಥಿಕ ಅಂಕಿ ಅಂಶಗಳನ್ನು ಗಮನಿಸಿದಾಗ ಹೆಮ್ಮೆಪಡುವ ರೀತಿಯಲ್ಲಿ ಪ್ರಗತಿ ಕಂಡುಬರುತ್ತದೆ.

ಸಹಕಾರಿಗಳ ಸಂಖ್ಯೆ	–	6407
ಶೇರು ಬಂಡವಾಳ	–	1,610 ಕೋಟಿ
ಠೇವಣಿ	–	43,704 ಕೋಟಿ

ನೀಡಿದ ಸಾಲಗಳು	–	34,030 ಕೋಟಿ
ಕಾಯ್ದಿಟ್ಟ ನಿಧಿಗಳು	–	3,690 ಕೋಟಿ
ದುಡಿಯುವ ಬಂಡವಾಳ	–	49,396 ಕೋಟಿ
ಲಾಭ	–	626 ಕೋಟಿ
ಉದ್ಯೋಗದಲ್ಲಿರುವವರು	–	75,000
ಇ–ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ	–	1692
ಸದಸ್ಯರ ಸಂಖ್ಯೆ	–	72 ಲಕ್ಷ

ಸಂಯುಕ್ತ ಸಹಕಾರಿಯ ಪ್ರಕಾರ್ಯಗಳು

1. ಸಹಕಾರಿಗಳನ್ನು ಪ್ರವರ್ತಿಸುವುದು, ಸಂಘಟಿಸುವುದು ಹಾಗೂ ಈ ಉದ್ದೇಶಕ್ಕಾಗಿ ಮಾದರಿ ಉಪವಿಧಿಗಳನ್ನು ರಚಿಸುವುದು ಹಾಗೂ ಸಹಕಾರಿ ತತ್ವಗಳಿಗನುಸಾರವಾಗಿ ಸಹಕಾರಿಗಳಿಗಾಗಿ ವಿವಿಧ ಕಾರ್ಯನೀತಿಯನ್ನು ರಚಿಸಲು ಮಾರ್ಗದರ್ಶಿ ಸೂತ್ರಗಳನ್ನು ಹೊರಡಿಸುವುದು.
2. ಸಹಕಾರ ತರಬೇತಿ, ಶಿಕ್ಷಣ ಹಾಗೂ ತಿಳುವಳಿಕೆ ನೀಡುವುದು ಮತ್ತು ಸಹಕಾರ ತತ್ವಗಳನ್ನು ಪ್ರಚಾರ ಮಾಡುವುದು.
3. ಸಂಶೋಧನೆ ಹಾಗೂ ಮೌಲ್ಯಮಾಪನವನ್ನು ಕೈಗೊಳ್ಳುವುದು ಮತ್ತು ಸದಸ್ಯ ಸಹಕಾರಿಗಳಿಗಾಗಿ ಯಥಾದೃಷ್ಟಿ ಅಭಿವೃದ್ಧಿ ಯೋಜನೆಗಳನ್ನು ಸಿದ್ಧಪಡಿಸಲು ನೆರವಾಗುವುದು.
4. ಸದಸ್ಯ ಸಹಕಾರಿಗಳ ನಡುವೆ ಸೌಹಾರ್ದ ಸಂಬಂಧವನ್ನು ಕಲ್ಪಿಸುವುದು.
5. ಸಹಕಾರಿ ವಿಚಾರಧಾರೆಯನ್ನು ಅನ್ವಯಿಸುವಂತೆ ಪ್ರಾಯೋಗಿಕ ಯೋಜನೆಗಳನ್ನು ಕೈಗೆತ್ತಿಕೊಳ್ಳುವುದು.
6. ಸದಸ್ಯ ಸಹಕಾರಿಗಳಿಗೆ ಕಾನೂನು ನೆರವು ಹಾಗೂ ಸಲಹೆ ಸೂಚನೆ ಒದಗಿಸುವುದು.
7. ಸಹಕಾರಿಗಳ ಅಂಕಿ–ಅಂಶಗಳ ಬ್ಯಾಂಕಿನಂತೆ ವರ್ತಿಸುವುದು
8. ಸದಸ್ಯ ಸಹಕಾರಿಗಳ ಹಿತಾಸಕ್ತಿಯನ್ನು ಪ್ರತಿನಿಧಿಸುವುದು.
9. ಅಗತ್ಯವಿರುವಾಗ ಮಂಡಲಿಯ ಸಭೆಗಳಲ್ಲಿ ಭಾಗವಹಿಸುವುದೂ ಸೇರಿದಂತೆ ಸದಸ್ಯ ಸಹಕಾರಿಗಳಿಗೆ ವ್ಯವಸ್ಥಾಪನಾ ಅಭಿವೃದ್ಧಿ ಸೇವೆಗಳನ್ನು ಕಲ್ಪಿಸುವುದು,
10. ಸದಸ್ಯ ಸಹಕಾರಿಗಳಿಗಾಗಿ ನಡತೆ ಸಂಹಿತೆಯನ್ನು ರೂಪಿಸುವುದು;
11. ಸದಸ್ಯ ಸಹಕಾರಿಗಳಿಗಾಗಿ ಆರ್ಥಿಕ ಸಬಲತೆಯ ಮಾನದಂಡಗಳನ್ನು ರೂಪಿಸುವುದು
12. ಕಾಯ್ದೆಯಲ್ಲಿ ಗೊತ್ತುಪಡಿಸಿದ ಅವಧಿಯೊಳಗಾಗಿ ಅದರ ಸದಸ್ಯ ಸಹಕಾರಿಗಳ ಲೆಕ್ಕ ಪರಿಶೋಧನೆ, ಚುನಾವಣೆಗಳು,
13. ಸಾಮಾನ್ಯ ಸಭೆಗಳು ನಡೆಯುವುದನ್ನು ಖಚಿತಪಡಿಸಿಕೊಳ್ಳುವುದು;
14. ಸದಸ್ಯ ಸಹಕಾರಿಗಳ ಪರವಾಗಿ ವ್ಯವಹಾರ ಹಾಗೂ ಸೇವೆಗಳನ್ನು ಕೈಗೊಳ್ಳುವುದು;
15. ಸದಸ್ಯ ಸಹಕಾರಿಗಳ ಪರಿವೀಕ್ಷಣೆಯ ಅಧಿಕಾರ ಹೊಂದಿರುವುದು

6. ಆಡಳಿತ ಮಂಡಳಿ ಹಾಗೂ ಅದರ ಪ್ರಕಾರ್ಯಗಳು :

ಸಂಸ್ಥೆಯ ಆಡಳಿತ ಮಂಡಳಿಯ, ಸರ್ವ ಸದಸ್ಯರ ಪ್ರತಿನಿಧಿಗಳಾಗಿ ಪ್ರಜಾಸತ್ತಾತ್ಮಕ ಪ್ರಕ್ರಿಯೆಯ ಮೂಲಕ ಆಯ್ಕೆಯಾದ ನಿರ್ದಿಷ್ಠ ಸಂಖ್ಯೆಯ ವ್ಯಕ್ತಿ ಸದಸ್ಯರ ಸಮೂಹ. ಇವರು ಸಾಮೂಹಿಕವಾಗಿ ಸದಸ್ಯರ ಹಿತಾಸಕ್ತಿಗಳ ರಕ್ಷಣೆ ಮತ್ತು ಸಂಸ್ಥೆಯ ಆಸ್ತಿಗಳ ಸಂರಕ್ಷಣೆಯ ಜವಾಬ್ದಾರಿ ನಿರ್ವಹಣೆಗಾಗಿ ಸಂಪೂರ್ಣ ಅಧಿಕಾರ ಹೊಂದಿರುತ್ತಾರೆ. ಸಹಕಾರಿ ಸಂಸ್ಥೆಗಳ ಆಡಳಿತ ಮಂಡಳಿ ಸದಸ್ಯರು, ಬಳಕೆದಾರ ಸದಸ್ಯರ ಪ್ರತಿನಿಧಿಗಳೇ ಹೊರತು ದೊಡ್ಡ ಬಂಡವಾಳ ಹೂಡಿಕೆದಾರರ ಪ್ರತಿನಿಧಿಗಳಲ್ಲ. ಆದ್ದರಿಂದ ಬಹುತೇಕ ಸಂದರ್ಭಗಳಲ್ಲಿ ಅವರು ಆರ್ಥಿಕ ಕ್ಷೇತ್ರದ ಪರಿಣತಿ ಹೊಂದಿರದೇ ಇರಬಹುದು. ಚುನಾಯಿತ ಆಡಳಿತ ಮಂಡಳಿಯ ವ್ಯವಸ್ಥಾಪನಾ ಜವಾಬ್ದಾರಿಗಳನ್ನು ವೃತ್ತಿಪರ, ಶಿಕ್ಷಿತ ಸಮರ್ಥ ಸಿಬ್ಬಂದಿ ಆಡಳಿತಕ್ಕೆ ಪ್ರತ್ಯಾಯೋಜಿಸಬಹುದು. ಇಂಥ ಜವಾಬ್ದಾರಿಗಳನ್ನು ಸಿಬ್ಬಂದಿಗಳಿಗೆ ವಹಿಸಿದರೂ ಸಹ ಅಂತಿಮ ಹೊಣೆಗಾರಿಕೆ ಆಡಳಿತ ಮಂಡಳಿಯದ್ದೇ ಆಗಿದೆ. ಅವರು ಸದಸ್ಯರು ಹಾಗೂ ಆಡಳಿತ ಸಿಬ್ಬಂದಿಯ ನಡುವಿನ ಕೊಂಡಿಯಾಗಿರುತ್ತಾರೆ. ಅಂದರೆ ಏನನ್ನು ಸಾಧಿಸಬೇಕೆನ್ನುವುದು ಆಡಳಿತ ಮಂಡಳಿಯ ನಿರ್ಧಾರ–ಸಾಧಿಸುವ ಕಾರ್ಯಯೋಜನೆ / ಮಾರ್ಗೋಪಾಯಗಳ ನಿರ್ದೇಶನದ ನಂತರ ಕ್ರಿಯಾತ್ಮಕ ಕಾರ್ಯಾನ್ವಯದ ಮೇಲ್ವಿಚಾರಣೆ ಹಾಗೂ ಮೌಲ್ಯಮಾಪನ ಆಡಳಿತ ಮಂಡಳಿಯ ಜವಾಬ್ದಾರಿ.

1. ಸಾಂಸ್ಥಿಕ ಗುರಿಗಳ ನಿರ್ಧಾರ :

ನಿರ್ದಿಷ್ಠ ಉದ್ದೇಶ ಸಾಧನೆಗಾಗಿ ಸಾಂಸ್ಥಿಕ ಗುರಿ ನಿರ್ಧಾರದ ಹೊಣೆಗಾರಿಕೆ ಆಡಳಿತ ಮಂಡಳಿಗೆ ಸೇರಿದ್ದು. ದೀರ್ಘಾವಧಿ ಉದ್ದೇಶಗಳ ಸೂಕ್ತ ಬದಲಾವಣೆ ಸಹ ಆಡಳಿತ ಮಂಡಳಿಯ ಜವಾಬ್ದಾರಿ.

2. ಕಾರ್ಯನೀತಿ ಹಾಗೂ ಕಾರ್ಯಕ್ರಮಗಳ ನಿರ್ಧಾರ :

ಆಡಳಿತ ಮಂಡಳಿಯು ತನ್ನ ಸಭೆಯಲ್ಲಿ ಪ್ರಮುಖ ನೀತಿಗಳ ಹಾಗೂ ದೀರ್ಘಾವಧಿ ಕಾರ್ಯ ಯೋಜನೆಯ ಕುರಿತು ಚರ್ಚಿಸಿ ನಿರ್ಧರಿಸಿ ಅನುಮೋದಸಬೇಕು. ಈ ರೀತಿ ನಿಯಮಗಳು ಹಾಗೂ ಕಾರ್ಯ ಯೋಜನೆಯ ಚೌಕಟ್ಟಿನಲ್ಲಿಯೇ ಕಾರ್ಯಕಾರಿ ಸಿಬ್ಬಂದಿ ತಮ್ಮ ಪ್ರಕಾರ್ಯಗಳನ್ನು ನಿರ್ವಹಿಸಬೇಕು.

3. ಅಧಿಕಾರ ಹಾಗೂ ಜವಾಬ್ದಾರಿಗಳ ಪ್ರತ್ಯಾಯೋಜನೆ/ನಿಯೋಜನೆ:

ಸಾಂಸ್ಥಿಕ ಹಾಗೂ ವ್ಯವಹಾರಿಕ ನಿರ್ವಹಣಾ ಕೌಶಲ್ಯಗಳಲ್ಲಿ ಆಡಳಿತ ಮಂಡಳಿ ಸದಸ್ಯರು ಪರಿಣತಿ ಹೊಂದಿರದೇ ಇರುವಾಗ, ಅಧಿನ ಸಿಬ್ಬಂದಿಯನ್ನು ಲಕ್ಷ್ಯ ಪೂರ್ವಕವಾಗಿ ಆಯ್ಕೆ ಮಾಡಬೇಕಾಗುತ್ತದೆ. ಯಾಕೆಂದರೆ ಈ ಹೊಣೆಗಾರಿಕೆಯನ್ನು ಸಿಬ್ಬಂದಿ ಆಡಳಿತ ವ್ಯವಸ್ಥೆಗೆ ಪ್ರತ್ಯಾಯೋಜಿಸುವಾಗ ಅವರು ತಮಗೆ ವಹಿಸಿದ ಪ್ರಕಾರ್ಯಗಳ ಸಮರ್ಪಕ ನಿರ್ವಹಣೆಗೆ ಸೂಕ್ತ ತಿಳುವಳಿಕೆ ಸಾಮರ್ಥ ಹಾಗೂ ಮನೋಸ್ಥಿತಿ ಹೊಂದಿರುವದನ್ನು ನಿಶ್ಚಿತಗೊಳಿಸಬೇಕಾಗುತ್ತದೆ. ಸ್ವಯಂ ನಿರ್ಣಯದ ಅಧಿಕಾರದ ವಿನಃ ಅಧಿಕಾರದ ಸಮರ್ಪಕ ಉಪಯೋಗ ಸಾಧ್ಯವಿಲ್ಲ. ಆದ್ದರಿಂದ ಕಾರ್ಯಾಚರಣೆಗಾಗಿ ಅವಶ್ಯ ನಿರ್ಣಾಯಕ ಅಧಿಕಾರ ಮತ್ತು ಸ್ವಾತಂತ್ರ್ಯವನ್ನು ಸಿಬ್ಬಂದಿಗೆ ನೀಡಬೇಕಾಗುತ್ತದೆ.

4. ಕಾರ್ಯಾಚರಣೆ ವ್ಯವಸ್ಥಿತ ವಿಶ್ಲೇಷಣೆ/ವಿಮರ್ಶೆ

ಇದೊಂದು ಆಡಳಿತ ಮಂಡಳಿಯ ಪ್ರಮುಖ ಜವಾಬ್ದಾರಿ. ಕಾರ್ಯಾಚರಣೆಯ ಪರಿಣಾಮಗಳ ಬಗ್ಗೆ ಕಾಲಕಾಲಕ್ಕೆ ನಿರ್ದಿಷ್ಟ ಅವಧಿಗಳಲ್ಲಿ ಸಿಬ್ಬಂದಿಗಳಿಂದ ವರದಿ–ಅಂಕಿ ಅಂಶಗಳನ್ನು ಪಡೆದು ಅವುಗಳನ್ನು ಪರಾಮರ್ಶೆ ನಡೆಸುವುದು ಅಗತ್ಯ. ಸಾಂಸ್ಥಿಕ ಗುರಿ ಸಾಧನೆಯ ಮಾರ್ಗದಲ್ಲಿ ಯಶಸ್ಸಿನ ಅಂಶಗಳನ್ನು ಸ್ಪಷ್ಟಪಡಿಸುವಂತಹ, ಈ ರೀತಿಯ

ಪರಿಣಾಮಾಕಾರಿ ವಿಶ್ಲೇಷಣೆಗಳಿಂದ ಪ್ರಸಕ್ತ ಸಾಧನೆಗಳನ್ನು ತಿಳಿದು ಮುಂದಿನ ಕಾರ್ಯ ಯೋಜನೆಯನ್ನು ರೂಪಿಸಲು ಅಥವಾ ಅವಶ್ಯವಿದ್ದರೆ ಬದಲಾಯಿಸಲು ಅನುಕೂಲವಾಗುತ್ತದೆ.

5. ಸಾರ್ವಜನಿಕ / ಸದಸ್ಯ ಸಂಬಂಧಗಳ ನಿರ್ವಹಣೆ

ಸಂಸ್ಥೆಯ ಸದಸ್ಯರು ಮತ್ತು ಸಿಬ್ಬಂದಿಗಳ ನಡುವೆ ಸಂಪರ್ಕ ಸೇತುವೆಯಾಗಿ ಆಡಳಿತ ಮಂಡಳಿ ಕಾರ್ಯನಿರ್ವಹಿಸುತ್ತದೆ. ಸಕಾಲಿಕ ಸಂವಾದ, ಸಂವಹನಗಳ ಮೂಲಕ ಸದಸ್ಯರ ಆಶಯ ನಿರೀಕ್ಷೆಗಳನ್ನು ತಿಳಿದು ಆ ದಿಶೆಯಲ್ಲಿ ಕಾರ್ಯಪ್ರವೃತ್ತರಾಗಲು ಸಾಧ್ಯ. ಸಾರ್ವಜನಿಕರಲ್ಲಿ ಸಂಸ್ಥೆಯ ಪ್ರತಿನಿಧಿಯಾಗಿ ಉತ್ತಮ ಬಾಂಧವ್ಯ ಸಂಪರ್ಕಗಳ ಮೂಲಕ ಸಮಾಜದಲ್ಲಿ ಸಂಸ್ಥೆಯ ಘನತೆಯನ್ನು ಹೆಚ್ಚಿಸಬಹುದು.

ಮುಖ್ಯಕಾರ್ಯನಿರ್ವಾಹಕರ ಪ್ರಕಾರ್ಯಗಳು:

ಮುಖ್ಯಕಾರ್ಯನಿರ್ವಾಹಕರು ಸಹಕಾರಿಯ ಆಡಳಿತ ವ್ಯವಸ್ಥೆಯ ಅತ್ಯಂತ ಪ್ರಮುಖ ವ್ಯಕ್ತಿ. ಆಡಳಿತ ಮಂಡಳಿಯಿಂದ ನೇಮಕಗೊಂಡ ಇವರು ಆಡಳಿತ ಮಂಡಳಿಗೆ ಉತ್ತರದಾಯಿತ್ವ ಹೊಂದಿರುತ್ತಾರೆ. ಬೇರೆ ಬೇರೆ ಸಂಸ್ಥೆಗಳಲ್ಲಿ ವ್ಯವಸ್ಥಾಪಕರು, ವ್ಯವಸ್ಥಾಪಕ ನಿರ್ದೇಶಕರು, ಕಾರ್ಯದರ್ಶಿ ಇತ್ಯಾದಿ ಹೆಸರುಗಳಿಂದ ಕರೆಯಲ್ಪಡುತ್ತಾರೆ. ಆಡಳಿತ ಮಂಡಳಿಯೊಡನೆ ವ್ಯವಹರಿಸುವಾಗ ಇವರು ಆಡಳಿತ ಮಂಡಳಿಯ ಉದ್ಯೋಗದಾತ ಸ್ಥಾನ ಇದೆ ಎನ್ನುವುದುನ್ನು ಗಮನದಲ್ಲಿ ಇಟ್ಟುಕೊಳ್ಳಬೇಕು. ಮುಖ್ಯ ಕಾರ್ಯನಿರ್ವಾಹಕನು ಸಂಸ್ಥೆಯ ದೈನಂದಿನ ಕೆಲಸ ಕಾರ್ಯಗಳನ್ನು ನಿರ್ದೇಶಿಸುತ್ತಾರೆ. ಇವರು ಸದಸ್ಯರು, ಸಿಬ್ಬಂದಿ, ಗ್ರಾಹಕರು, ಸಾರ್ವಜನಿಕರು ಮತ್ತು ಸರಕಾರಗಳ ಪ್ರಭಾವಗಳನ್ನು ಸಮನ್ವಯಗೊಳಿಸುತ್ತಾರೆ. ಸಹಕಾರ ಸಂಸ್ಥೆಗಳ ಯಶಸ್ಸು ಬಹುತೇಕವಾಗಿ ಮುಖ್ಯ ಕಾರ್ಯನಿವಾಕರ ಉತ್ಸಾಹ ಹಾಗೂ ಕರ್ತೃತ್ವ ಶಕ್ತಿಗಳನ್ನು ಅವಲಂಬಿಸಿದೆ.

ಇವರ ಪ್ರಕಾರ್ಯಗಳು:

1. ಧ್ಯೇಯ ಧೋರಣೆಗಳ ಕಾರ್ಯಾಚರಣೆ

ಆಡಳಿತ ಮಂಡಳಿಯ ಧ್ಯೇಯ ಧೋರಣೆಗಳನ್ನು ಆಧರಿಸಿ ಕಾರ್ಯಾಚರಣೆಯ ಮೂಲಕ ಉದ್ದೇಶಿತ ಗುರಿ ಸಾಧನೆಯು ಮುಖ್ಯಕಾರ್ಯನಿರ್ವಾಹಕರ ಜವಾಬ್ದಾರಿ. ಇದಕ್ಕಾಗಿ ಅವಶ್ಯಕ ಕ್ರಿಯಾ ಯೋಜನೆ, ಸಂಘಟನೆ, ನಿರ್ದೇಶನ ಹಾಗೂ ನಿಯಂತ್ರಣದ ಮೂಲಕ ಅಧೀನ ಸಿಬ್ಬಂದಿಗಳನ್ನು ನಿಯೋಜಿಸುವುದರ ಜೊತೆಗೆ ಒಟ್ಟಾರೆ ಸಂಸ್ಥೆಯ ಕಾರ್ಯಾಚರಣೆಯನ್ನು ನೆರವೇರಿಸಲು ಎಲ್ಲ ಅವಶ್ಯಕ ಕಾರ್ಯಗಳನ್ನು ಕೈಗೊಳ್ಳುವ ಜವಾಬ್ದಾರಿ ಇವರದು.

2. ಸಿಬ್ಬಂದಿ ನಿಯೋಜನೆ ಹಾಗೂ ಅಧಿಕಾರ ಪ್ರತ್ಯಾಯೋಜನೆ

ವಿವಿಧ ಶ್ರೇಣಿಗಳಲ್ಲಿ ಸೂಕ್ತವಾದ ಸಿಬ್ಬಂದಿ ನಿಯೋಜನೆ ಮುಖ್ಯಕಾರ್ಯನಿರ್ವಾಹಕನ ಜವಾಬ್ದಾರಿ. ಅಧೀನ ಸಿಬ್ಬಂದಿಗಳಿಗೆ ನಿರ್ದಿಷ್ಟ ಪ್ರಕಾರ್ಯಗಳನ್ನು/ಕೆಲಸಗಳನ್ನು ವಹಿಸುವದು. ಆ ಪ್ರಕಾರ್ಯಗಳ ನಿರ್ವಹಣೆಗೆ ಅಗತ್ಯ ಅಧಿಕಾರವನ್ನು ನೀಡುವುದು ಹಾಗೂ ಅವರ ಪ್ರಕಾರ್ಯಗಳ ಮಾರ್ಗದರ್ಶನ, ಮೇಲ್ವಿಚಾರಣೆ ಹಾಗೂ ನಿಯಂತ್ರಣ ಇವರ ಜವಾಬ್ದಾರಿ.

3. ಆಡಳಿತ ಮಂಡಳಿಗೆ ಮಾಹಿತಿ ಪೂರೈಕೆ:

ನಿರ್ದಿಷ್ಟ ಅವಧಿಯಲ್ಲಿ ಆಡಳಿತ್ಮಾಕ ಮತ್ತು ಕಾರ್ಯಾಚರಣೆ / ವ್ಯಾವಹಾರಿಕ ಸಂಬಂಧಿ ವಿವಿಧ ಮಾಹಿತಿಗಳನ್ನು ಆಡಳಿತ ಮಂಡಳಿಗೆ ಪೂರೈಸಿ, ಅವರ ಈ ಮಾಹಿತಿಯನ್ನಾಧರಿಸಿ, ಸೂಕ್ತ ನಿರ್ಣಯಗಳನ್ನು ಕೈಗೊಳ್ಳಲು ಅನುಕೂಲ ಮಾಡಿಕೊಡಬೇಕು.

4. ಆಡಳಿತ ಮಂಡಳಿಗೆ ಸಹಾಯ – ಸಹಕಾರ:

ಆಡಳಿತ ಮುಖ್ಯಸ್ಥರು, ಕಾರ್ಯಸಾಧ್ಯವಾದ ನೈಜ ಗುರಿಗಳನ್ನು ಹೊಂದಲು ಸಹಾಯ ಮಾಡಬೇಕು. ಸಂಸ್ಥೆಯ ಧ್ಯೇಯ ಧೋರಣೆಗಳನ್ನು ಹಾಗೂ ಕಾರ್ಯಕ್ರಮಗಳನ್ನು ರೂಪಿಸುವಲ್ಲಿ ಆಡಳಿತ ಮಂಡಳಿಗೆ ಸಹಾಯಕನಾಗಿರಬೇಕು. ಸಂಸ್ಥೆಯ ದೈನಂದಿನ ಆಡಳಿತ ಮತ್ತು ವ್ಯವಹಾರದ ನೇರ ಸಂಪರ್ಕದಲ್ಲಿ ಇರುವ ಇವರು ಆಡಳಿತ ಮಂಡಳಿಗೆ ಸೂಕ್ತ ಸಲಹೆ, ಮಾರ್ಗದರ್ಶನ ನೀಡಲು ಸಮರ್ಥರಾಗಿರಬೇಕು.

ಈ ವಿಶ್ಲೇಷಣೆಗಳಿಂದ ಆಡಳಿತ ಮಂಡಳಿ ಹಾಗೂ ವ್ಯವಸ್ಥಾಪನ ಸಿಬ್ಬಂದಿಗಳಿಗೆ ಅವರ ಕಾರ್ಯಾಚರಣೆಗೆ ಸಂಬಂಧಿಸಿ ಮಾರ್ಗಸೂಚಿಗಳನ್ನು ಸಿದ್ಧಪಡಿಸಲು ಸಾಧ್ಯವಾಗುತ್ತದೆ. ಇಂತಹ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸುವುದರಿಂದ, ಆರೋಗ್ಯಕರ, ಸಮರ್ಥ ಆಡಳಿತ ಪದ್ಧತಿಯನ್ನು ಸ್ಥಾಪಿಸಿ ಆಡಳಿತ ಮಂಡಳಿ ಹಾಗೂ ವ್ಯವಸ್ಥಾಪನಾ ಸಿಬ್ಬಂದಿಯ ನಡುವೆ ಆರೋಗ್ಯಕರ ಮತ್ತು ಅರ್ಥಪೂರ್ಣ ಸಂಬಂಧಗಳ ಬೆಳವಣಿಗೆಗೆ ಸಹಾಯಕವಾಗುತ್ತದೆ.

ಆಡಳಿತ ಮಂಡಳಿ ಹಾಗೂ ವ್ಯವಸ್ಥಾಪನಾ ಸಿಬ್ಬಂದಿಗಳ ನಡುವೆ ಪರಸ್ಪರ ತಿಳುವಳಿಕೆ ಅಗತ್ಯ. ಇವರು ತಮ್ಮ ತಮ್ಮ ಪಾತ್ರ ಮತ್ತು ಹೊಣೆಗಾರಿಕೆಗಳನ್ನು ಅರಿತು ಬೇರೆ ಕ್ಷೇತ್ರದಲ್ಲಿ ಹಸ್ತಕ್ಷೇಪದಿಂದ ದೂರವಿರಬೇಕು. ಅಂದರೆ ಆಡಳಿತ ಮಂಡಳಿಯು ಸಂಸ್ಥೆಯ ಧ್ಯೇಯ ಧೋರಣೆ, ಕಾರ್ಯಯೋಜನೆಗಳನ್ನು ರೂಪಿಸುವುದಕ್ಕೆ ತಮ್ಮ ಜವಾಬ್ದಾರಿಯನ್ನು ಸೀಮಿತಗೊಳಿಸಿ ಅವುಗಳ ಕಾರ್ಯಾನ್ವಯವನ್ನು ವ್ಯವಸ್ಥಾಪನಾ ಸಿಬ್ಬಂದಿಗಳಿಗೆ ವಹಿಸಬೇಕು. ಈ ರೀತಿಯ ಕಾರ್ಯಾನ್ವಯದ ಸಕಾಲಿಕ ಪರಿಶೀಲನೆ, ಮೌಲ್ಯಮಾಪನ, ಆಡಳಿತ ಮಂಡಳಿಯ ಜವಾಬ್ದಾರಿ ಆಗಿರುತ್ತದೆ.

ಆಡಳಿತ ಮಂಡಳಿಯ ಸದಸ್ಯರು ನೆನಪಿಡಬೇಕಾದ ಸಂಗತಿಯೆಂದರೆ, ಅಧಿಕೃತವಾದ ಸಭೆಯಲ್ಲಿ ಭಾಗವಹಿಸಿದಾಗ ಮಾತ್ರ ಅವರಿಗೆ ಆಡಳಿತ ಮಂಡಳಿಯ ಹಕ್ಕು ಅಧಿಕಾರ ಪ್ರಾಪ್ತವಾಗುತ್ತದೆ. ನಿರ್ದಿಷ್ಟವಾಗಿ ಆಡಳಿತ ಮಂಡಳಿಯಿಂದ ಪ್ರತ್ಯಾಯೋಜಿತ ಅಧಿಕಾರಗಳ ಹೊರತು ವೈಯಕ್ತಿಕವಾಗಿ ಆಡಳಿತ ಮಂಡಳಿ ಸದಸ್ಯರಿಗೆ ಇನ್ನಾವುದೇ ವಿಶೇಷ ಅಧಿಕಾರ ಇರುವುದಿಲ್ಲ. ಆಡಳಿತ ಮಂಡಳಿಯ ಸದಸ್ಯರು ವೈಯಕ್ತಿಕವಾಗಿ ಕಾರ್ಯಾಚರಣೆ ಸಿಬ್ಬಂದಿಗಳಿಗೆ ಆದೇಶ/ನಿರ್ದೇಶನ ನೀಡುವುದರಿಂದ ಆಡಳಿತ ಮಂಡಳಿ ಹಾಗೂ ವ್ಯವಸ್ಥಾಪನಾ ಸಿಬ್ಬಂದಿಗಳ ಸಂಬಂಧ ಮುರಿದು ಬೀಳುತ್ತದೆ.

1. ನಿರ್ದಿಷ್ಟ ಕಾಲಮಿತಿಯಲ್ಲಿ ಆಡಳಿತ ಮಂಡಳಿಯ ಸಭೆಗಳನ್ನು ನಡೆಸುವದರಿಂದ ಆಡಳಿತ ಹಾಗೂ ವ್ಯವಸ್ಥಾಪನಾ ಸಿಬ್ಬಂದಿಯ ಸಂಬಂಧಗಳು ಉತ್ತಮಗೊಳ್ಳುತ್ತವೆ. ಆಡಳಿತ ಮಂಡಳಿ ಸಭೆಗಳಲ್ಲಿ ಮುಖ್ಯಕಾರ್ಯನಿರ್ವಹಣಾಧಿಕಾರಿಗಳ ಭಾಗವಹಿಸುವಿಕೆ ಅತ್ಯಗತ್ಯ.

2. ಆಡಳಿತ ಮಂಡಳಿಯ ಸದಸ್ಯರು ತಮ್ಮ ಹೊಣೆಗಾರಿಕೆಯನ್ನು ಅರಿತು, ಸಂಸ್ಥೆಯನ್ನು / ಆ ಸ್ಥಾನವನ್ನು ವೈಯಕ್ತಿಕ ಅಥವಾ ರಾಜಕೀಯ ಲಾಭಕ್ಕಾಗಿ ಬಳಸಬಾರದು.

3. ಆಡಳಿತ ಮಂಡಳಿಯ ಸದಸ್ಯರೆಲ್ಲರೂ ಸುಸಂಘಟಿತ ತಂಡವಾಗಿ ಕಾರ್ಯನಿರ್ವಹಿಸಬೇಕು. ತಮ್ಮ ತಮ್ಮ ಗುಂಪುಗಾರಿಕೆಗೆ ಅವಕಾಶ ನೀಡಬಾರದು.

ಆ ವ್ಯವಸ್ಥಾಪನಾ ಸಿಬ್ಬಂದಿಗಳು ಆಡಳಿತ ಮಂಡಳಿಯ ಅಂತಃಕಲಹ, ಗುಂಪುಗಾರಿಕೆಗಳಿಂದ ದೂರ ಇರಬೇಕು ಹಾಗೂ ಚುನಾವಣೆಯಂಥ ಸಂದರ್ಭದಲ್ಲಿ ನೇರವಾಗಿ ಅಥವಾ ಪರೋಕ್ಷವಾಗಿ ಭಾಗಿಯಾಗಬಾರದು.

7. ಸೌಹಾರ್ದ ಕಾಯ್ದೆಯ ಮಾರ್ಗದರ್ಶಿ

ಭಾರತದಲ್ಲಿ ಸಹಕಾರಿ ಕಾಯ್ದೆ ಜಾರಿಗೆ ಬಂದು ನೂರು ವರ್ಷಗಳು ಸಂದಿವೆ. 1904 ಮಾರ್ಚ 25 ರಿಂದ ಜಾರಿಗೆ ಬಂದ The Cooperative Credit Societies Act, 1904 ನಮ್ಮ ದೇಶದ ಮೊದಲ ಸಹಕಾರಿ ಕಾಯ್ದೆ. ಧಾರವಾಡ ಜಿಲ್ಲೆಯ (ಈಗಿನ ಗದಗ) ಕಣಗಿನಹಾಳ ಗ್ರಾಮದಲ್ಲಿ ಶ್ರೀ ಸಿದ್ದನಗೌಡ ಸಣ್ಣರಾಮನಗೌಡ ಪಾಟೀಲರು 8 ಜುಲೈ 1905 ರಂದು 12 ಜನ ಸದಸ್ಯರೊಂದಿಗೆ 2 ಸಾವಿರ ರೂಪಾಯಿ ಶೇರು ಬಂಡವಾಳದೊಂದಿಗೆ ಆರಂಭಿಸಿದ ಕೃಷಿ ಪತ್ತಿನ ಸಹಕಾರ ಸಂಘವು ದೇಶದ ಮೊದಲ ಸಹಕಾರ ಕಾಯ್ದೆಯಡಿ ಮೊದಲ ಸಹಕಾರ ಸಂಘ ಎಂಬುದು ಕರ್ನಾಟಕ ರಾಜ್ಯದ ಹೆಗ್ಗಳಿಕೆ. 1904 ರಲ್ಲಿ ಜಾರಿಗೆ ಬಂದ ಕಾಯ್ದೆಯು ಕೇವಲ ಪತ್ತಿನ ಸಹಕಾರ ಸಂಘಗಳಿಗಾಗಿತ್ತು. ನಂತರ 1912 ರಲ್ಲಿ ಬೇರೆ ಬೇರೆ ಚಟುವಟಿಕೆಗಳನ್ನು ನಡೆಸಲು ಅನುವು ಮಾಡಿಕೊಡುವ The Cooperative Societies Act, 1912 ಜಾರಿಗೆ ಬಂದಿತು. 1919ರ ಭಾರತ ಸರಕಾರದ ಕಾಯ್ದೆಯಂತೆ ಸಹಕಾರ ವಿಷಯವು ಪ್ರಾಂತೀಯ ಸರಕಾರಗಳ ವಿಷಯ ಪಟ್ಟಿಯಲ್ಲಿ ಬಂದಾಗ ಪ್ರಾಂತೀಯ ಸರಕಾರಗಳು ತಮ್ಮದೇ ಸಹಕಾರ ಕಾಯ್ದೆಗಳನ್ನು ಕಾಲಾನುಕ್ರಮದಲ್ಲಿ ರೂಪಿಸಿಕೊಂಡವು. ಈ ಸಂದರ್ಭದಲ್ಲಿ 1912ರ ಕಾಯ್ದೆಯು ಅವುಗಳಿಗೆ ಮಾದರಿ ಆಗಿತ್ತು. ಸ್ವಾತಂತ್ರ್ಯಾನಂತರ ವಿವಿಧ ರಾಜ್ಯ ಸರಕಾರಗಳು ತಮ್ಮದೇ ಆದ ಸಹಕಾರಿ ಕಾಯ್ದೆಯನ್ನು ಮತ್ತು ಕೇಂದ್ರ ಸರಕಾರವು ಒಂದು ರಾಜ್ಯಕ್ಕಿಂತ ಹೆಚ್ಚು ರಾಜ್ಯಗಳಲ್ಲಿ ಚಟುವಟಿಕೆ ನಡೆಸುವ ಸಹಕಾರಿ ಸಂಸ್ಥೆಗಳಿಗೆ ಬಹುರಾಜ್ಯಗಳ ಸಹಕಾರಿ ಕಾಯ್ದೆಯನ್ನು ಜಾರಿಗೆ ತಂದವು. ಈ ಕಾಯ್ದೆಗಳಿಗೂ 1912ರ ಕಾಯ್ದೆಯೇ ಮಾದರಿಯಾಗಿತ್ತು.

ದೇಶದ ಅಭಿವೃದ್ಧಿಯಲ್ಲಿ ಸಹಕಾರಿ ರಂಗವನ್ನು ತೊಡಗಿಸಲು ಕೇಂದ್ರ ಸರಕಾರ ಹಾಗೂ ರಾಜ್ಯ ಸರಕಾರಗಳು ಈ ಕ್ಷೇತ್ರಕ್ಕೆ ವಿವಿಧ ಯೋಜನೆಗಳ ಮೂಲಕ ಕೋಟ್ಯಂತರ ರೂಪಾಯಿ ಹಣವನ್ನು ಶೇರು ಹಣ, ಸಬ್ಸಿಡಿ, ಸಹಾಯ ಧನ ಮುಂತಾದ ರೂಪದಲ್ಲಿ ನೀಡಿದವು. ಗ್ರಾಮಕ್ಕೊಂದು ಪಂಚಾಯತಿ, ಗ್ರಾಮಕ್ಕೊಂದು ಶಾಲೆ ಹಾಗೂ ಗ್ರಾಮಕ್ಕೊಂದು ಸಹಕಾರ ಸಂಘ ಇವುಗಳು ಸಮುದಾಯ ಅಭಿವೃದ್ಧಿಯ ಮೂರು ಆಧಾರ ಸ್ತಂಭಗಳು ಎಂದೇ ಕರೆಯಲ್ಪಟ್ಟವು. ಅದಕ್ಕಾಗಿಯೇ ಕೇಂದ್ರ ಹಾಗೂ ರಾಜ್ಯ ಸರಕಾರಗಳು ಸ್ವಾತಂತ್ರ್ಯಾನಂತರ ಕೋಟ್ಯಂತರ ರೂಪಾಯಿ ಹಣವನ್ನು ಸಹಕಾರಿ ಕ್ಷೇತ್ರಕ್ಕೆ ಸುರಿದವು. ಆದರೂ ಸಹಕಾರಿ ಕ್ಷೇತ್ರ ನೀರೀಕ್ಷಿತ ಯಶಸ್ಸು ಸಾಧಿಸಲಿಲ್ಲ. ಈ ಕುರಿತು ಅನೇಕ ವೇದಿಕೆಗಳ ಮೂಲಕ ಚರ್ಚೆ ಆರಂಭವಾಯಿತು. ಸಹಕಾರಿ ಕ್ಷೇತ್ರ ನಿರೀಕ್ಷಿತ ಯಶಸ್ಸು ಸಾಧಿಸಿಲ್ಲ ಹಾಗೂ ಸಹಕಾರಿ ರಂಗ ದಾರಿ ತಪ್ಪಿದೆ ಎಂಬ ಸಹಕಾರಿಗಳ ಕೂಗು ದಿನೇ ದಿನೇ ಹೆಚ್ಚುತ್ತಾ ಹೋಯಿತು. ಇದನ್ನು ಗಮನಿಸಿದ ಕೇಂದ್ರ ಸರ್ಕಾರ ಶ್ರೀ ಅರ್ಧನಾರೀಶ್ವರನ್ ಇವರ ಅಧ್ಯಕ್ಷತೆಯಲ್ಲಿ ಈ ಕುರಿತು ಅಧ್ಯಯನ ನಡೆಸಲು ಅಧ್ಯಯನ ಸಮಿತಿಯೊಂದನ್ನು ರಚಿಸಿತು. ಈ ಸಮಿತಿಯು 1987ರಲ್ಲಿ ವರದಿ ನೀಡಿ ಸರಕಾರದ ಅತಿಯಾದ ಹಸ್ತಕ್ಷೇಪದಿಂದಾಗಿ ದೇಶದಲ್ಲಿ ಸಹಕಾರಿ ಚಳುವಳಿ ವಿಫಲವಾಗಿದೆಯೆಂದು ಹೇಳಿತು. ಸಹಕಾರಿ ಚಳುವಳಿ ವಿಫಲವಾದರೂ ಜನಸಾಮಾನ್ಯರು ತಮ್ಮ ಆರ್ಥಿಕ ಏಳ್ಗೆಗಾಗಿ ತಾವೇ ಸ್ವಯಂಸ್ಫೂರ್ತಿಯಿಂದ ಭಾಗವಹಿಸುವ ಈ ಆಂದೋಲನ ಯಶಸ್ವಿಯಾಗುವ ಅಗತ್ಯವಿರುವುದನ್ನು ಗುರುತಿಸಿದ ಕೇಂದ್ರ ಯೋಜನಾ ಆಯೋಗ ಸರಕಾರದ ಹಸ್ತಕ್ಷೇಪ ತಡೆಯಬಲ್ಲ, ಸದಸ್ಯರಿಗೆ ಹೆಚ್ಚು ಅಧಿಕಾರ ನೀಡುವ ಹಾಗೂ ಅವರ ಸಹಭಾಗಿತ್ವ ಹೆಚ್ಚಿಸುವ, ಸಹಕಾರಿ ಸಂಘಗಳಿಗೆ ಚಟುವಟಿಕೆ ನಡೆಸಲು ಮುಕ್ತ ವಾತಾವರಣ ನಿರ್ಮಿಸುವಂತಹ ಮಾದರಿ ಸಹಕಾರಿ ಕಾಯ್ದೆಯನ್ನು ರೂಪಿಸಲು ಚೌಧರಿ ಬ್ರಹ್ಮಪ್ರಕಾಶರ ನೇತೃತ್ವದಲ್ಲಿ ಇನ್ನೊಂದು ಸಮಿತಿಯನ್ನು ನೇಮಿಸಿತು. ಈ ಸಮಿತಿ 1991 ರಲ್ಲಿ ವಿವಿಧ ರಾಜ್ಯಗಳ ಪ್ರಸ್ತುತ ಜಾರಿಯಲ್ಲಿರುವ ಸಹಕಾರಿ ಕಾಯ್ದೆಗಳ ಬಗ್ಗೆ ವಿವರವಾದ ಅಧ್ಯಯನ ನಡೆಸಿ ಒಂದು ಮಾದರಿ ಕಾಯ್ದೆ

ರೂಪಿಸಿತು. ಈ ಮಾದರಿ ಸಹಕಾರಿ ಕಾಯ್ದೆಯನ್ನು ಅಳವಡಿಸಿಕೊಳ್ಳಲು ಸಲಹೆ ನೀಡಿ ಕೇಂದ್ರ ಸರಕಾರವು ಎಲ್ಲ ರಾಜ್ಯ ಸರಕಾರಗಳಿಗೆ ಕಳುಹಿಸಿತು. ಈ ರೀತಿ ವಿವರವಾದ ಅಧ್ಯಯನದ ಫಲವಾಗಿ ಯೋಜನಾ ಆಯೋಗ ರೂಪಿಸಿದ ಮಾದರಿ ಸಹಕಾರಿ ಕಾಯ್ದೆಗನುಗುಣವಾಗಿ ನಮ್ಮ ರಾಜ್ಯದಲ್ಲಿ ಜಾರಿಗೆ ಬಂದ ಕಾಯ್ದೆಯೇ "ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997"

ಕರ್ನಾಟಕ ಸೌಹಾರ್ದ ಸಹಕಾರ ಅಧಿನಿಯಮ, 1997ರ ಮುಖ್ಯಾಂಶಗಳು:

- ಸಹಕಾರಿಯ ಸಂಪೂರ್ಣ ಒಡೆತನ, ನಿರ್ವಹಣೆ, ನಿಯಂತ್ರಣ ಸದಸ್ಯರದ್ದೇ.
- ಸ್ವಸಹಾಯ ಮತ್ತು ಪರಸ್ಪರ ಆಧಾರದ ಮೇಲೆ ಸಹಕಾರಿ ಸಂಸ್ಥೆಗಳ ರಚನೆ.
- ಸಹಕಾರಿ ತತ್ವಗಳಿಂದ ಮಾರ್ಗದರ್ಶನ. ಸಹಕಾರಿ ತತ್ವಗಳನ್ನು ಕಾನೂನಿನಲ್ಲಿ ಅಳವಡಿಕೆ.
- ಸಹಕಾರಿಗಳಿಗೆ ಹೆಚ್ಚು ಜವಾಬ್ದಾರಿ, ಹೆಚ್ಚು ವ್ಯಾವಹಾರಿಕ ಸ್ವಾತಂತ್ರ್ಯ.
- ಸಹಕಾರಿಗಳು ಹೆಚ್ಚು ಸ್ಪರ್ಧಾತ್ಮಕ ಹಾಗೂ ಸ್ವಾವಲಂಬಿಯಾಗಲು ಪ್ರೋತ್ಸಾಹ.
- ಸಹಕಾರಿಗಳಿಗೆ ಆರ್ಥಿಕ ಉದ್ದಿಮೆಯ ಸ್ಥಾನ.
- ನೋಂದಣಿ ಮತ್ತು ಸಮಾಪನೆ ಹೊರತು ಸಹಕಾರಿಗಳ ಮುಕ್ತ ಕಾರ್ಯಾಚರಣೆಗೆ ಅಡ್ಡಿಯಾಗುತ್ತಿದ್ದ ಸರಕಾರದ ಎಲ್ಲಾ ನಿಯಂತ್ರಣ ಮತ್ತು ಹಸ್ತಕ್ಷೇಪಗಳ ನಿವಾರಣೆ.
- ಪೂರಕ ಸಂಸ್ಥೆ ಪ್ರಾರಂಭಿಸಲು ಹಾಗೂ ಇತರೆ ಸಂಸ್ಥೆಗಳ ನಡುವೆ ಸಹೋದ್ಯಮ ಹಾಗೂ ಪಾಲುದಾರಿಕೆ ಆರಂಭಿಸಲು ಪ್ರೋತ್ಸಾಹ.
- ಯಾವುದೇ 20 ಅಥವಾ ಹೆಚ್ಚು ಸೌಹಾರ್ದ ಸಹಕಾರಿಗಳು ಸೇರಿ ಒಕ್ಕೂಟ ಸಹಕಾರಿಯಾಗಿ ಚಟುವಟಿಕೆ ನಡೆಸಲು ಅವಕಾಶ.
- ಸಹಕಾರಿಗಳ ಮೇಲ್ವಿಚಾರಣೆ, ಉಸ್ತುವಾರಿ, ನಿಯಂತ್ರಣ ಇತ್ಯಾದಿಗಳ ಜವಾಬ್ದಾರಿ ಸಹಕಾರಿಗಳಿಂದಲೇ ರಚಿತವಾದ ಸಂಯುಕ್ತ ಸಹಕಾರಿಗೆ.
- ಲೆಕ್ಕಪರಿಶೋಧನೆ ಸಹಕಾರಿಯ ಸಾಮಾನ್ಯ ಸಭೆಯಲ್ಲಿ ನೇಮಿಸಲ್ಪಟ್ಟ ಲೆಕ್ಕ ಪರಿಶೋಧಕರಿಂದ. ಲೆಕ್ಕ ಪರಿಶೋಧಕರು ಸಹಕಾರಿಗಳ ಸಾಮಾನ್ಯ ಸಭೆಯಲ್ಲಿ ಭಾಗವಹಿಸಲೇ ಬೇಕು. ಲೆಕ್ಕ ಪರಿಶೋಧಕರಿಗೂ ಜವಾಬ್ದಾರಿ.
- ಸಹಕಾರಿಗಳು ಡಿ.ಸಿ.ಸಿ ಬ್ಯಾಂಕುಗಳಷ್ಟೇ ಅಲ್ಲದೇ ಯಾವುದೇ ಅನುಸೂಚಿತ ಬ್ಯಾಂಕಿನ ಜೊತೆಗೆ ವ್ಯವಹಾರ ಮಾಡಲು ಮುಕ್ತ ಅವಕಾಶ.
- ಸದಸ್ಯರಿಗೆ ಸಹಕಾರಿಯೊಂದಿಗೆ ಕನಿಷ್ಠ ವ್ಯವಹಾರ ಮಾಡುವ ಹಾಗೂ ಸಾಮಾನ್ಯ ಸಭೆಗಳಲ್ಲಿ ಭಾಗವಹಿಸುವ ಜವಾಬ್ದಾರಿ.
- ಸಹಕಾರಿಯ ಸಿಬ್ಬಂದಿ ನೇಮಕಾತಿ, ವೇತನಶ್ರೇಣಿ ನಿರ್ಧಾರ, ಭಡ್ತಿ, ಇತ್ಯಾದಿಗಳಿಗೆ ಸಾಮಾನ್ಯ ಸಭೆಯ ನಿರ್ಣಯವೇ ಅಂತಿಮ.

- ಯಾವುದೇ ವ್ಯಕ್ತಿಯ ಸದಸ್ಯತ್ವವನ್ನು ಆಡಳಿತ ಮಂಡಳಿ ನಿರಾಕರಿಸಿದರೆ ಅಥವಾ ತೆಗೆದು ಹಾಕಿದರೆ ಮೇಲ್ಮನವಿ ಆಯಾ ಸಹಕಾರಿಯ ಸಾಮಾನ್ಯ ಸಭೆಗೆ. ಈ ವಿಷಯದಲ್ಲಿ ಸಾಮಾನ್ಯ ಸಭೆಯ ನಿರ್ಣಯವೇ ಅಂತಿಮ.
- ಯಾವುದೇ ಸಹಕಾರಿಯ ಆಡಳಿತ ಮಂಡಳಿಯ 1/3ರಷ್ಟು ಸದಸ್ಯರು ಅಥವಾ ಒಟ್ಟು ಸದಸ್ಯರ 1/10 ಜನ ಅಥವಾ ಸಂಯುಕ್ತ ಸಹಕಾರಿ ಕೋರಿದಲ್ಲಿ ನಿಬಂಧಕರಿಂದ ವಿಚಾರಣೆ.
- ಸದಸ್ಯರೊಂದಿಗೆ ಉಂಟಾದ ವಿವಾದಗಳ ಪರಿಹಾರಕ್ಕೆ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆಯಲ್ಲಿ ಇರುವಂತೆ ಇಲಾಖೆಯ ಪಂಚಾಯಿತಿ ವ್ಯವಸ್ಥೆಯ ಯಥಾವತ್ ಮುಂದುವರಿಕೆ.
- ಸಮಾಪನೆಗೆ ಒಪ್ಪಿಗೆ ಸಾಮಾನ್ಯ ಸಭೆಯಿಂದಲೇ.

ಸ್ವಯಂ ನಿಯಂತ್ರಣಾ ಸಂಸ್ಥೆಯಾಗಿ ಸಂಯುಕ್ತ ಸಹಕಾರಿ

ಸೌಹಾರ್ದ ಕಾಯ್ದೆಯ ಜಾರಿಯ ಉದ್ದೇಶ ಸಹಕಾರಿಗಳಿಗೆ ಹೆಚ್ಚು ವ್ಯಾವಹಾರಿಕ ಸ್ವಾತಂತ್ರ್ಯ ನೀಡುವುದು ಹಾಗೂ ಅವುಗಳನ್ನು ಸ್ವಯಂ ಆಡಳಿತದ ಶಿಸ್ತಿಗೆ ಒಳಪಡಿಸುವುದು. ಸ್ಯಯಮಾಡಳಿತದ ಮೊದಲ ಹಂತವಾಗಿ ಸಹಕಾರಿಯ ಆಡಳಿತ ಮಂಡಳಿಗೆ ಕೆಲವು ನಿರ್ದಿಷ್ಟ ಪಡಿಸಿದ ಅಧಿಕಾರಗಳನ್ನು ನೀಡಲಾಗಿದೆ. ಸ್ವಯಂ ಆಡಳಿತದ ಎರಡನೆಯ ಹಂತ, ಸಹಕಾರಿಯ ಸಾಮಾನ್ಯ ಸಭೆ. ಸಹಕಾರಿಯ ನಿಯಂತ್ರಣದ, ಉಸ್ತುವಾರಿಯ ಕೆಲವು ಅಧಿಕಾರಗಳನ್ನು ಸಾಮಾನ್ಯ ಸಭೆಗೆ ನೀಡಲಾಗಿದೆ. ಸ್ವಯಮಾಡಳಿತದ ಮೂರನೆಯ ಹಂತ ಕಾಯ್ದೆಯಡಿ ರಚಿಸಲ್ಪಟ್ಟ ಸಂಯುಕ್ತ ಸಹಕಾರಿ. ಸಹಕಾರಿಗಳ ಕೆಲವು ಆಡಳಿತಾತ್ಮಕ ಉಸ್ತುವಾರಿಗಳ ನಿರ್ವಹಣೆಯ ಜವಾಬ್ದಾರಿಯನ್ನು ಸಂಯುಕ್ತ ಸಹಕಾರಿಗೆ ನೀಡಲಾಗಿದೆ.

ಸಂಯುಕ್ತ ಸಹಕಾರಿಯ ರಚನೆ:

ಸೌಹಾರ್ದ ಕಾಯ್ದೆಯಡಿ ನೋಂದಣಿಗೊಂಡ ಎಲ್ಲಾ ಸಹಕಾರಿಗಳೂ ಸಂಯುಕ್ತ ಸಹಕಾರಿಯ ಸದಸ್ಯರಾಗುತ್ತಾರೆ. ಸಂಯುಕ್ತ ಸಹಕಾರಿಯ ಮಂಡಳಿಯ ಚುನಾವಣೆ ಐದು ವರ್ಷಗಳಿಗೊಮ್ಮೆ ನಡೆಯುತ್ತದೆ. ಚುನಾಯಿತ ನಿರ್ದೇಶಕರುಗಳ ಪದಾವಧಿಯು ಚುನಾವಣೆ ನಡೆದ ದಿನಾಂಕದಿಂದ ಐದು ವರ್ಷಗಳಾಗಿರುತ್ತದೆ. ಮಂಡಲಿಯ ಸಭೆ ವರ್ಷಕ್ಕೆ ಕನಿಷ್ಟ ಆರು ಬಾರಿ ಹಾಗೂ ಸಾಮಾನ್ಯ ಸಭೆ ವರ್ಷಕ್ಕೆ ಒಮ್ಮೆ ನಡೆಯುತ್ತದೆ.

ಸಂಯುಕ್ತ ಸಹಕಾರಿಯ ಜವಾಬ್ದಾರಿಗಳು ಹಾಗೂ ಅಧಿಕಾರಗಳು:

- ಸಹಕಾರಿಗಳ ಚುನಾವಣೆಗಳು ನಡೆದಿರುವುದನ್ನು ಖಚಿತಪಡಿಸಿಕೊಳ್ಳುವುದು.
- ಸಹಕಾರಿಗಳು ನಿಗದಿತ ಸಮಯದಲ್ಲಿ ಸಾಮಾನ್ಯ ಸಭೆ ಹಾಗೂ ಲೆಕ್ಕ ಪರಿಶೋಧನೆ ಮಾಡಿರುವುದನ್ನು ಖಚಿತಪಡಿಸಿಕೊಳ್ಳುವುದು.
- ಸಹಕಾರಿಗಳು ಸಾಮಾನ್ಯ ಸಭೆ ನಡೆಸದಿದ್ದಲ್ಲಿ, ಲೆಕ್ಕ ಪರಿಶೋಧನೆ ಮಾಡಿಸದಿದ್ದಲ್ಲಿ, ಕಾಯ್ದೆ ಹಾಗೂ ಉಪವಿಧಿಗಳನ್ನು ಉಲ್ಲಂಘಿಸಿದಲ್ಲಿ ಮಂಡಳಿಯ ರದ್ದಿಯಾತಿ, ವಿಶೇಷಾಧಿಕಾರಿಯ ನೇಮಕವೂ ಸೇರಿದಂತೆ ಕ್ರಮ ಜರುಗಿಸುವುದು.
- ಸಹಕಾರಿಗಳಿಗಾಗಿ ವಿವಿಧ ಕಾರ್ಯನೀತಿ ರೂಪಿಸಲು ಮಾರ್ಗದರ್ಶಿ ಸೂತ್ರಗಳನ್ನು ಹೊರಡಿಸುವುದು.
- ಮಾದರಿ ಉಪವಿಧಿ ರಚಿಸುವುದು.

- ಸಹಕಾರಿಗಳಿಗೆ ಆರ್ಥಿಕ ಸಬಲತೆಯ ಮಾನದಂಡಗಳನ್ನು ರೂಪಿಸುವುದು.
- ಸಹಕಾರಿಗಳ ಪರಿವೀಕ್ಷಣೆ.
- ಸಹಕಾರಿಗಳಿಗೆ ಶಿಕ್ಷಣ, ತರಬೇತಿ ಹಾಗೂ ಮಾರ್ಗದರ್ಶನ.

ಸಂಯುಕ್ತ ಸಹಕಾರಿಯು ಶಾಸನಬದ್ಧ ಸ್ವಯಂ ಆಡಳಿತ ನಿರ್ವಹಣೆಯ ಅಧಿಕಾರವನ್ನು ಹೊಂದಿದೆ. ಮತ್ತು ತನ್ನ ಸದಸ್ಯ ಸಹಕಾರಿಗಳ ಹಿತಾಸಕ್ತಿ ಕಾಪಾಡುವ, ಅವುಗಳ ಪರವಾಗಿ ವ್ಯವಹಾರ ಹಾಗೂ ಸೇವೆ ಕೈಗೊಳ್ಳುವ, ಸದಸ್ಯ ಸಹಕಾರಿಗಳಿಗೆ ಶಿಕ್ಷಣ ನೀಡುವ ಜವಾಬ್ದಾರಿಗಳನ್ನು ನಿರ್ವಹಿಸುತ್ತದೆ. ಒಂದು ಕಡೆ ಸ್ವಯಂ ಶಿಸ್ತನ್ನು ಕಾಪಾಡಲು ಕೆಲವು ನಿಯಂತ್ರಣಾಧಿಕಾರ ಮತ್ತು ಇನ್ನೊಂದೆಡೆ ಸಹಕಾರಿಗಳ ಹಿತಾಸಕ್ತಿ ಕಾಪಾಡುವ ಜವಾಬ್ದಾರಿ ಈ ಎರಡೂ ಪಾತ್ರಗಳನ್ನು ನಿರ್ವಹಿಸುವ ಸಂಸ್ಥೆಯಾಗಿದೆ.

ಕಾಯ್ದೆಯಡಿ ನಿಬಂಧಕರ ಅಧಿಕಾರ

- ಸಹಕಾರಿಗಳ ನೋಂದಣಿ
- ಸಹಕಾರಿಗಳ ಉಪವಿಧಿ ತಿದ್ದುಪಡಿ
- ವಿವಾದಗಳ ಇತ್ಯರ್ಥ
- ಸಹಕಾರಿಯ ನಿಗದಿತ ಸದಸ್ಯರ ಕೋರಿಕೆಯ ಮೇರೆಗೆ ವಿಚಾರಣೆ
- ಸಹಕಾರಿಯ ಸಮಾಪನೆ

ಜನಪ್ರಿಯಗೊಳ್ಳುತ್ತಿರುವ ಸೌಹಾರ್ದ ಕಾಯ್ದೆ

ಸೌಹಾರ್ದ ಕಾಯ್ದೆ ಜಾರಿಗೆ ಬಂದಿದ್ದು, 2001 ಜನವರಿ 1 ರಂದು. ಸಂಯುಕ್ತ ಸಹಕಾರಿ ನೋಂದಣಿಗೊಂಡು ಕೆಲಸ ಆರಂಭಿಸಿದ್ದು 2002ರಲ್ಲಿ. 25 ವರ್ಷಗಳ ಅವಧಿಯಲ್ಲಿ ಸೌಹಾರ್ದ ಸಹಕಾರಿಗಳ ಸಂಖ್ಯೆ 6407ರ ಗಡಿ ದಾಟಿ ಮುನ್ನಡೆದಿದೆ. ಬ್ಯಾಂಕುಗಳು, ಪತ್ತಿನ ಸಹಕಾರಿಗಳು, ವಿವಿಧೋದ್ದೇಶ ಸಹಕಾರಿಗಳು, ಗೃಹ ನಿರ್ಮಾಣ ಸಹಕಾರಿಗಳು, ಶಿಕ್ಷಣ ಸಹಕಾರಿಗಳು, ಮಹಿಳಾ ಸ್ವಸಹಾಯ ಸಹಕಾರಿಗಳು, ಕುಶಲ ಕಲೆಗಳ ಸಹಕಾರಿಗಳು ಹೀಗೆ ಹತ್ತು ಹಲವು ವಿಧದ ಸಹಕಾರಿಗಳು ಸೌಹಾರ್ದ ಕಾಯ್ದೆಯಡಿ ಚಟುವಟಿಕೆ ನಡೆಸುತ್ತಿವೆ.

ಸಂಯುಕ್ತ ಸಹಕಾರಿಯೂ ಕಾಯ್ದೆಯಡಿ ತನಗೆ ವಹಿಸಲಾದ ಎಲ್ಲಾ ಜವಾಬ್ದಾರಿಗಳನ್ನು ಪರಿಣಾಮಕಾರಿಯಾಗಿ ನಿಭಾಯಿಸಿದೆ. ಸದಸ್ಯ ಸಹಕಾರಿಗಳಿಗೆ ವಿವಿಧ ರೀತಿಯ ತರಬೇತಿ ನೀಡುವುದು, ವಿವಿಧ ಮಾರ್ಗಸೂಚಿ ಹೊರಡಿಸುವುದು ಹಾಗೂ ಅವುಗಳನ್ನು ಸ್ವಯಂ ಶಿಸ್ತಿನ ಚೌಕಟ್ಟಿನಲ್ಲಿ ತರುವುದು ಈ ಎಲ್ಲಾ ಕೆಲಸಗಳನ್ನು ಸರಿಯಾಗಿ ನಿಭಾಯಿಸಿದೆ.

ಹೆಚ್ಚು ಹೆಚ್ಚು ಸಹಕಾರಿಗಳನ್ನು ಸೌಹಾರ್ದ ಕಾಯ್ದೆಯಡಿ ತರಲು ವಿಶೇಷ ಚಟುವಟಿಕೆಗಳನ್ನೂ ಕೈಗೆತ್ತಿಕೊಂಡಿದೆ. ತನ್ನದೇ ಆದ ವೆಬ್‌ಸೈಟ್ ಹೊಂದಿ ಎಲ್ಲಾ ವಿವರಗಳನ್ನು ಸದಾಕಾಲ ಸದಸ್ಯ ಸಹಕಾರಿಗಳಿಗೆ ಹಾಗೂ ಇತರ ಎಲ್ಲಾ ಸಹಕಾರಿಗಳಿಗೆ ಒದಗಿಸುತ್ತಾ ಬರುತ್ತಿದೆ.

8. ಹೊಸ ಸೌಹಾರ್ದ ಸಹಕಾರಿಯನ್ನು ಆರಂಭಿಸುವುದು ಹೇಗೆ?

ಹೊಸ ಸಹಕಾರಿ ಸಂಘವನ್ನು ಆರಂಭಿಸುವಾಗ ನಾಲ್ಕು ಹಂತಗಳಿವೆ. ಪ್ರಾಥಮಿಕ ಸಿದ್ಧತೆ, ಶೇರು ಸಂಗ್ರಹಣೆ, ನೋಂದಣಿ ಹಾಗೂ ಕಾರ್ಯಾರಂಭ.

ಅ. ಪ್ರಾಥಮಿಕ ಸಿದ್ಧತೆ :

ಬೇರೆ ಬೇರೆ ಕುಟುಂಬಕ್ಕೆ ಸೇರಿದ ಕನಿಷ್ಠ 10 ಜನರು ಒಟ್ಟಿಗೆ ಸೇರಿ, ಒಂದು ನಿರ್ದಿಷ್ಟ ಆರ್ಥಿಕ ಚಟುವಟಿಕೆಯನ್ನು ಗುರುತಿಸಿ ಪ್ರವರ್ತಕರ ಸಭೆ ಕರೆಯಬೇಕು. ಈ ಸಭೆಯಲ್ಲಿ ಸಹಕಾರಿಯ ಉದ್ದೇಶ, ಹೆಸರು, ಕಾರ್ಯಾಚರಣೆ ಪ್ರದೇಶ, ಅಧಿಕೃತ ಶೇರು ಬಂಡವಾಳ ಮುಂತಾದವುಗಳನ್ನು ನಿರ್ಧರಿಸಬೇಕು. ಪ್ರವರ್ತಕರ ಸಭೆಯಲ್ಲಿ ಭಾಗವಹಿಸಿದ ಜನರಲ್ಲಿ ಕನಿಷ್ಠ 10 ಜನರನ್ನು ಪ್ರವರ್ತಕರೆಂದು ಆಯ್ಕೆ ಮಾಡಬೇಕು. ಅವರಲ್ಲಿ ಒಬ್ಬರನ್ನು ಮುಖ್ಯ ಪ್ರವರ್ತಕರೆಂದು ಆಯ್ಕೆ ಮಾಡಬೇಕು. ಈ ಸಭೆಯ ನಡವಳಿಕೆಗಳನ್ನು ದಾಖಲು ಮಾಡಬೇಕು.

ಆ. ಶೇರು ಸಂಗ್ರಹಣೆ :

ಪ್ರವರ್ತಕರ ಸಭೆಯ ನಂತರ ಶೇರು ಸಂಗ್ರಹಣೆಗೆ ಮುಖ್ಯ ಪ್ರವರ್ತಕರನ್ನು ಪ್ರಾಧಿಕೃತಗೊಳಿಸಲು ನಿಮ್ಮ ಉದ್ದೇಶಿತ ಸಹಕಾರಿಯ ಕಾರ್ಯವ್ಯಾಪ್ತಿಗೆ ಸಂಬಂಧಿಸಿದ ಸಹಕಾರಿಗಳ ನಿಬಂಧಕರಿಗೆ ಈ ಕೆಳಗಿನ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಬೇಕು.

1. ಪ್ರವರ್ತಕರ ಸಭೆಯ ನೋಟೀಸು
2. ಪ್ರವರ್ತಕರ ಸಭೆಯ ಮತ್ತು ನಂತರ ನಡೆದ ಸಭೆಗಳ ದೃಢೀಕೃತ ನಕಲು
3. ಪ್ರವರ್ತಕರ ಸಭೆಯಲ್ಲಿ ಹಾಜರಿದ್ದ ಸದಸ್ಯರ ಪಟ್ಟಿ ಮತ್ತು ಸಹಿಯ ಯಥಾ ಪ್ರತಿ
4. ಎಲ್ಲಾ ಪ್ರವರ್ತಕರ (ಕನಿಷ್ಠ 10) ವೈಯಕ್ತಿಕ ವಿವರಗಳು. ಅವರ ಭಾವಚಿತ್ರ ಮತ್ತು ಸಹಿಯೊಂದಿಗೆ
5. ಪ್ರವರ್ತಕರ ಸಭೆಯಲ್ಲಿ ಅನುಮೋದನೆಗೊಂಡ ಉಪವಿಧಿ. ಉಪವಿಧಿಯ ಪ್ರತಿಯೊಂದು ಪುಟಕ್ಕೆ ಮುಖ್ಯ ಪ್ರವರ್ತಕರು ಸಹಿ ಮಾಡಬೇಕು ಹಾಗೂ ಕೊನೆಯ ಪುಟದಲ್ಲಿ ಎಲ್ಲಾ ಪ್ರವರ್ತಕರ ಸಹಿ ಇರಬೇಕು.

ಅರ್ಜಿ ಸಲ್ಲಿಸಬೇಕಾದ ಸಹಕಾರಿ ನಿಬಂಧಕರುಗಳು: ನಿಮ್ಮ ಸಹಕಾರಿಯ ಕಾರ್ಯಕ್ಷೇತ್ರದ ವ್ಯಾಪ್ತಿ ತಾಲೂಕಿಗಿಂತ ಕಡಿಮೆ ಇದ್ದಲ್ಲಿ ಸಹಾಯಕ ನಿಬಂಧಕರಿಗೆ, ತಾಲೂಕಾ ಮಟ್ಟ ಹಾಗೂ ಅದಕ್ಕಿಂತ ಮೇಲ್ಪಟ್ಟು ಜಿಲ್ಲೆಗಿಂತ ಕಡಿಮೆ ಇದ್ದಲ್ಲಿ ಉಪ ನಿಬಂಧಕರಿಗೆ, ಜಿಲ್ಲಾ ಮಟ್ಟ ಹಾಗೂ ಅದಕ್ಕಿಂತ ಮೇಲ್ಪಟ್ಟು ಪ್ರಾಂತ ಮಟ್ಟಕ್ಕಿಂತ ಕಡಿಮೆ ಇದ್ದಲ್ಲಿ ಜಂಟಿ ನಿಬಂಧಕರಿಗೆ, ಪ್ರಾಂತ ಮಟ್ಟ ಹಾಗೂ ಮೇಲ್ಪಟ್ಟ ಸಹಕಾರಿ ಇದ್ದಲ್ಲಿ ಬೆಂಗಳೂರಿನಲ್ಲಿ ಸಹಕಾರಿಗಳ ನಿಬಂಧಕರಿಗೆ.

ನಿಬಂಧಕರು ನಿಮ್ಮ ಅರ್ಜಿಯನ್ನು ಪರಿಶೀಲಿಸಿದ ನಂತರ ಶೇರು ಹಣ ಸಂಗ್ರಹಣೆಗೆ ಮುಖ್ಯ ಪ್ರವರ್ತಕರನ್ನು ಪ್ರಾಧಿಕೃತಗೊಳಿಸುತ್ತಾರೆ. ನಿಗದಿತ ದಿನದೊಳಗೆ ಶೇರು ಹಣ ಸಂಗ್ರಹಿಸಿ ನಿಬಂಧಕರು ಸೂಚಿಸಿದ ಬ್ಯಾಂಕಿನಲ್ಲಿ ಜಮಾ ಮಾಡಬೇಕು. ಆ ಬ್ಯಾಂಕು ನಿಬಂಧಕರ ನಿರ್ದೇಶನದ ಮೇರೆಗೆ ನಿಮ್ಮ ಹಣವನ್ನು ಸ್ವೀಕರಿಸಿ ಅದನ್ನು ನಿಮ್ಮ ಸಹಕಾರಿಯ ಹೆಸರಿನ ಅಮಾನತ್ ಖಾತೆಗೆ ಜಮಾ ಮಾಡುತ್ತಾರೆ. ಶೇರು ಸಂಗ್ರಹಣೆಗೆ ಅಗತ್ಯವಾದ ಮಾದರಿ ಶೇರು ಅರ್ಜಿ ಹಾಗೂ ಶೇರು ಹಣಕ್ಕೆ ನೀಡುವ ರಸೀದಿಯ ನೀಡುವುದು.

ಇ. ನೋಂದಣಿ :

ಶೇರು ಹಣ ಸಂಗ್ರಹಣೆ ಮುಗಿದ ನಂತರ ಸಹಕಾರಿಯ ನೋಂದಣಿಗೆ ಶೇರು ಸಂಗ್ರಹಣೆಗೆ ಅನುಮತಿ ನೀಡಿದ ನಿಬಂಧಕರಿಗೆ ಈ ಕೆಳಗಿನ ದಾಖಲೆಗಳೊಂದಿಗೆ ಅರ್ಜಿಸಲ್ಲಿಸಬೇಕು.

(ನಿಯಮ –03ರಲ್ಲಿ ಇರುವಂತೆ ಕ್ರಮವಿಡುವುದು)

1. ಶೇರು ಹಣವನ್ನು ಬ್ಯಾಂಕಿನಲ್ಲಿ ಜಮಾ ಮಾಡಿದ ಬಗ್ಗೆ ಪ್ರಮಾಣ ಪತ್ರ, ಕೌಂಟರ್ ಫಾಯಿಲ್, ಪಾಸ್ ಪುಸ್ತಕದ ನಕಲು ಪ್ರತಿ.
2. ಶೇರು ಹಣ ಪಾವತಿಸಿದ ಸದಸ್ಯರ ಪಟ್ಟಿ.
3. ಉದ್ದೇಶಿತ ಸಹಕಾರಿಯ ಪ್ರವರ್ತಕರ ಸಭೆ ಅಂಗೀಕರಿಸಿದ ಉಪವಿಧಿಯ ಐದು ಪ್ರತಿಗಳು. ಎಲ್ಲಾ ಪ್ರತಿಗಳ ಪ್ರತಿ ಪುಟಕ್ಕೆ ಮುಖ್ಯ ಪ್ರವರ್ತಕರ ಹಾಗೂ ಕೊನೆಯ ಪುಟಕ್ಕೆ ಎಲ್ಲಾ ಪ್ರವರ್ತಕರ ಸಹಿ ಇರಬೇಕು. ಉಪವಿಧಿಯನ್ನು ಪುಸ್ತಕದ ರೂಪದಲ್ಲಿ ಬೈಂಡ್ ಮಾಡಿಸುವುದು ಸೂಕ್ತ.
4. ಅಧಿಕೃತ ಶೇರು ಬಂಡವಾಳದ ಶೇ. 1 ರಷ್ಟು ನೋಂದಣಿ ಶುಲ್ಕ ಸಂದಾಯ ಮಾಡಿದ್ದರ ಬಗ್ಗೆ ಚಲನ್‌ನಿನ ಒಂದು ಪ್ರತಿ. (ಕನಿಷ್ಠ ರೂ. 500/– ; ಗರಿಷ್ಠ ರೂ. 5000/–) ನೋಂದಣಿಗೆ ಅರ್ಜಿ ಸಲ್ಲಿಸುವಾಗ ಚಲನ್‌ಗೆ ಸಂಬಂಧಿಸಿದ

ನಿಬಂಧಕರ ಸಹಿ ಪಡೆದು ನೋಂದಣಿ ಶುಲ್ಕವನ್ನು ಸರ್ಕಾರದ ಖಜಾನೆಯಲ್ಲಿ ತುಂಬಬೇಕು.

ನಿಬಂಧಕರು ನಿಮ್ಮ ಅರ್ಜಿಯನ್ನು ಪರಿಶೀಲಿಸಿ ನಿಮ್ಮ ಸಹಕಾರಿಯನ್ನು ನೋಂದಣಿ ಮಾಡುತ್ತಾರೆ. ನೋಂದಣಿ ಆದೇಶ ಜೊತೆಗೆ ನೋಂದಣಿ ಪ್ರಮಾಣ ಪತ್ರ, ನೋಂದಾಯಿತ ಉಪವಿಧಿಯ ಒಂದು ಪ್ರತಿಯನ್ನು ನೀಡುತ್ತಾರೆ.

ಈ. ಕಾರ್ಯಾರಂಭ :

ಸಹಕಾರಿಯ ನೋಂದಣಿಯಾದ ನಂತರ ಮುಖ್ಯ ಪ್ರವರ್ತಕರು ಪ್ರಥಮ ಸಾಮಾನ್ಯ ಸಭೆಯನ್ನು ಕರೆಯಬೇಕು. ಈ ಸಭೆಯಲ್ಲಿ ಪ್ರಥಮ ಆಡಳಿತ ಮಂಡಳಿಯ ಚುನಾವಣೆ ನಡೆಸಬೇಕು. ನಿಮ್ಮ ಸಹಕಾರಿಯ ನೋಂದಣಿಯಾದ ಕೂಡಲೇ ಪ್ರಥಮ ಆಡಳಿತ ಮಂಡಲಿಯ ಚುನಾವಣೆ ನಡೆಸಲು ರಿಟರ್ನಿಂಗ್ ಅಧಿಕಾರಿಯನ್ನು ಸಹಕಾರ ಇಲಾಖೆ ನೇಮಿಸುತ್ತದೆ. ಚುನಾವಣಾಧಿಕಾರಿಗಳು ಮುಖ್ಯ ಪ್ರವರ್ತಕರ ಜೊತೆಗೆ ಚರ್ಚಿಸಿ ಚುನಾವಣೆಯ ಪ್ರಕ್ರಿಯೆಯನ್ನು ನಡೆಸುತ್ತಾರೆ. ಪ್ರಥಮ ಆಡಳಿತ ಮಂಡಳಿಯ ಚುನಾವಣೆಯ ಹೊರತಾಗಿ ಸಾಮಾನ್ಯ ಸಭೆಯಲ್ಲಿ ಈ ಕೆಳಕಂಡ ವಿಷಯಗಳ ಬಗ್ಗೆ ನಿರ್ಣಯ ಕೈಗೊಳ್ಳಬೇಕು.

1. ಮಾನ್ಯ ಸಹಕಾರಿಗಳ ನಿಬಂಧಕರು ಮಾಡಿದ ಸಹಕಾರಿಯ ನೋಂದಣಿ ಮತ್ತು ನೋಂದಾಯಿತ ಉಪವಿಧಿಯನ್ನು ಒಪ್ಪಿಕೊಳ್ಳುವುದು.
2. ಸಾಮಾನ್ಯ ಸಭೆಯ ವರೆಗಿನ ಜಮಾ ಖರ್ಚುಗಳನ್ನು ಪರಿಶೀಲಿಸುವುದು ಮತ್ತು ಒಪ್ಪಿಕೊಳ್ಳುವುದು.
3. ಸದಸ್ಯತ್ವವನ್ನು ಕೋರಿ ಅರ್ಜಿ ಸಲ್ಲಿಸಿದವರಿಗೆ ಸದಸ್ಯತ್ವವನ್ನು ನೀಡುವುದು.
4. ಬ್ಯಾಂಕ್ ಖಾತೆ ತೆರೆಯುವ ಮತ್ತು ಚಲಾಯಿಸುವ ಕುರಿತು.
5. ಪ್ರಸಕ್ತ ವರ್ಷದ ಕಾರ್ಯ ಯೋಜನೆ.
6. ಪ್ರಸಕ್ತ ವರ್ಷದ ಅಂದಾಜು ಆಯವ್ಯಯ.
7. ಸಿಬ್ಬಂದಿ ವೃಂದ ಬಲಕ್ಕೆ ಅನುಮೋದನೆ ನೀಡುವುದು.
8. ಆಡಳಿತ ಮಂಡಲಿಯ ಆಯ್ಕೆ.
9. ಲೆಕ್ಕಪರಿಶೋಧನಾ ಇಲಾಖೆ ಪ್ರಕಟಿಸಿದ ಪಟ್ಟಿಯಿಂದ ಲೆಕ್ಕ ಪರಿಶೋಧಕರ ನೇಮಕ.

• ಮೊದಲ ಆಡಳಿತ ಮಂಡಳಿ ಚುನಾವಣೆ ನಡೆದ ನಂತರ ಪದಾಧಿಕಾರಿಗಳ ಆಯ್ಕೆಗೆ ರಿಟರ್ನಿಂಗ್ ಅಧಿಕಾರಿ ಚುನಾಯಿತ ಮಂಡಳಿ ಸಭೆ ಕರೆಯಬೇಕು. ಈ ಸಭೆಯಲ್ಲಿ ಪದಾಧಿಕಾರಿಗಳನ್ನು ಆಯ್ಕೆ ಮಾಡಬೇಕು. ರಿಟರ್ನಿಂಗ್ ಅಧಿಕಾರಿ ಈ ಸಭೆಯ ಅಧ್ಯಕ್ಷತೆ ವಹಿಸಬೇಕು.

ಸಹಕಾರಿಯ ಹೆಸರಿನಲ್ಲಿ ಬ್ಯಾಂಕ್ ಖಾತೆ ನಿರ್ವಹಿಸುವವರ ಹೆಸರನ್ನು ನಿರ್ಧರಿಸಿ ನಿರ್ಣಯ ಕೈಗೊಳ್ಳಬೇಕು. ಈ ನಿರ್ಣಯದೊಂದಿಗೆ ನಿಬಂಧಕರಿಗೆ ಪತ್ರ ಬರೆದು ಅಮಾನತ್ ಖಾತೆಯಲ್ಲಿರುವ ಆರಂಭಿಕ ಶೇರು ಹಣವನ್ನು ಸಹಕಾರಿಯ ಹೆಸರಿನ ಖಾತೆಗೆ ವರ್ಗಾಯಿಸಲು ಕೋರಬೇಕು. ನಿಮ್ಮ ಕೋರಿಕೆಯಂತೆ ನಿಬಂಧಕರು ಹಾಗೆ ಮಾಡುವಂತೆ ಬ್ಯಾಂಕಿಗೆ ನಿರ್ದೇಶಿಸುತ್ತಾರೆ.

ಈಗ ನಿಮ್ಮ ಸಹಕಾರಿ ಸಂಪೂರ್ಣವಾಗಿ ಕಾರ್ಯಾರಂಭಿಸಲು ಸಿದ್ಧವಿದೆ.

ದಯವಿಟ್ಟು ಗಮನಿಸಿ :

ಅ. ಸಹಕಾರಿಗೆ ಹೆಸರು ಇಡುವಾಗ ಗಮನಿಸಬೇಕಾದ ಸಂಗತಿಗಳು

* ಹೆಸರಿನಲ್ಲಿ "ಸೌಹಾರ್ದ ಸಹಕಾರಿ ಸಂಘ ನಿಯಮಿತ" ಪದ ಕಡ್ಡಾಯವಾಗಿರತಕ್ಕದ್ದು.
* ಸಹಕಾರಿಯ ಕಾರ್ಯಚಟುವಟಿಕೆಗಳನ್ನು ಸ್ಪಷ್ಟವಾಗಿ ತಿಳಿಸುವಂತಿರಬೇಕು.
* "ಸೌಹಾರ್ದ ಸಹಕಾರಿ ಸಂಘ ನಿಯಮಿತ/ಲಿಮಿಟೆಡ್" ಎಂಬ ಪದ ಬಳಸಬಹುದು.
* ಈಗಾಗಲೇ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ, 1959ರಲ್ಲಿ ಅಥವಾ ಕರ್ನಾಟಕ ಸೌಹಾರ್ದ ಸಹಕಾರ ಕಾಯ್ದೆ, 1997 ರಡಿ ನೋಂದಾಯಿತವಾದ ಸಂಸ್ಥೆಗಳು ಬಳಸಿದ ಹೆಸರು ಬಳಸುವಂತಿಲ್ಲ.

ಆ. ಮಾದರಿ ಉಪವಿಧಿಗಳಿಗಾಗಿ ಸಂಯುಕ್ತ ಸಹಕಾರಿಯ ಕಛೇರಿಯನ್ನು ಸಂಪರ್ಕಿಸುವುದು. ಅಥವಾ ಸಂಯುಕ್ತ ಸಹಕಾರಿಯ ವೆಬ್ ಸೈಟ್ www.souharda.coop ನಿಂದ ಡೌನ್ ಲೋಡ್ ಮಾಡಿಕೊಳ್ಳಬಹುದು.

ಇ. ನೋಂದಣಿ ವೇಳೆಗೆ ಏನೇ ಮಾಹಿತಿ ಬೇಕಾಗಿದ್ದರೆ, ಏನೇ ತೊಂದರೆ ಎದುರಿಸಿದರೆ ಸಂಯುಕ್ತ ಸಹಕಾರಿ ನಿಮಗೆ ಸಹಾಯ ಮಾಡಲು ಯತ್ನಿಸುತ್ತದೆ.

ಈ. ನೋಂದಣಿ ಆದೇಶ ಪಡೆದ ಕೂಡಲೇ ನೋಂದಣಿ ವೇಳೆಗೆ ಏನೇ ಮಾಹಿತಿ ಬೇಕಾಗಿದ್ದರೆ, ಏನೇ ತೊಂದರೆ ಎದುರಿಸಿದರೆ ಸಂಯುಕ್ತ ಸಹಕಾರಿಗೆ ಪತ್ರ ಬರೆವುದು.

ಸೌಹಾರ್ದ ಸಹಕಾರಿ ಪರಿವಾರಕ್ಕೆ ನಿಮಗೆ ಹಾರ್ದಿಕ ಸ್ವಾಗತ

9. ಕರ್ನಾಟಕ ಸಹಕಾರ ಸಂಘಗಳ ಕಾಯ್ದೆಯಡಿಯ ಸಹಕಾರ ಸಂಘಗಳು /ಬ್ಯಾಂಕುಗಳು ಸೌಹಾರ್ದ ಸಹಕಾರಿಗಳಾಗುವುದು ಹೇಗೆ?

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ರಡಿ ಕೆಲಸ ನಿರ್ವಹಿಸುತ್ತಿರುವ ಈ ಕೆಳಗಿನ ಅರ್ಹತೆ ಹೊಂದಿರುವ ಗೃಹ ನಿರ್ಮಾಣ ಸಹಕಾರ ಸಂಘಗಳ ಹೊರತಾಗಿ ಎಲ್ಲ ರೀತಿಯ ಸಹಕಾರ ಸಂಘಗಳು / ಬ್ಯಾಂಕುಗಳು ಕರ್ನಾಟಕ ಸೌಹಾರ್ದ ಸಹಕಾರ ಕಾಯ್ದೆ, 1997ಕ್ಕೆ ಪರಿವರ್ತಿತಗೊಳ್ಳಬಹುದು.

ಅ. ಪರಿವರ್ತನೆಯಾಗ ಬಯಸುವ ಸಹಕಾರ ಸಂಘ / ಬ್ಯಾಂಕು ಶೇರು, ಗ್ಯಾರಂಟಿ, ಸಾಲ ಇತ್ಯಾದಿ ಯಾವುದೇ ರೂಪದಲ್ಲಿ ಸರಕಾರದ ಸಹಾಯ/ಇತರೆ ಅನುದಾನ ಪಡೆದಿರಬಾರದು.

ಆ. ಪರಿವರ್ತನೆಯ ಕಾಲಕ್ಕೆ ಡಿಸಿಸಿ ಬ್ಯಾಂಕ್ ಅಥವಾ ಅಪೆಕ್ಸ್ ಬ್ಯಾಂಕ್ ಸೇರಿದಂತೆ ಇತರೆ ಯಾವುದೇ ಸಹಕಾರಿ ಸಂಘ / ಬ್ಯಾಂಕಿನಿಂದ ಸಾಲ ಪಡೆದಿರಬಾರದು.

ಗಮನಿಸಿ :

ಕ. ಬೇರೆ ಬೇರೆ ಯೋಜನೆಗಳಡಿ ಸರಕಾರದಿಂದ ಸಬ್ಸಿಡಿ ಪಡೆದಿದ್ದರೆ ತೊಂದರೆ ಇಲ್ಲ.

ಖ. ಡಿಸಿಸಿ ಬ್ಯಾಂಕು ಅಥವಾ ಅಪೆಕ್ಸ್ ಬ್ಯಾಂಕು ಅಥವಾ ಇತರೆ ಯಾವುದೇ ಸಹಕಾರಿ ಬ್ಯಾಂಕಿನಿಂದ ಸೌಹಾರ್ದ ಕಾಯ್ದೆಗೆ ಪರಿವರ್ತನೆಯಾದ ನಂತರ ಮತ್ತೆ ಹೊಸದಾಗಿ ಸಾಲ ಪಡೆಯಬಹುದು.

ಪರಿವರ್ತನೆಯ ಪ್ರಕ್ರಿಯೆ :

ಸಹಕಾರಿ ಸಂಘ / ಬ್ಯಾಂಕು ತನ್ನ ಸಾಮಾನ್ಯ ಸಭೆ ಅಥವಾ ವಿಶೇಷ ಸಾಮಾನ್ಯ ಸಭೆಯಲ್ಲಿ ನಿರ್ಣಯ ಮಾಡುವುದರ ಮೂಲಕ ಸೌಹಾರ್ದ ಕಾಯ್ದೆಗೆ ಪರಿವರ್ತಿತಗೊಳ್ಳಬಹುದು.

ಸಾಮಾನ್ಯ ಸಭೆಯ ನೋಟೀಸಿನಲ್ಲಿ ಈ ಕೆಳಗಿನ ವಿಷಯಗಳಿರಬೇಕು.

1. ನಿಮ್ಮ ಸಹಕಾರ ಸಂಘ/ಬ್ಯಾಂಕ್‌ನ್ನು ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ಕ್ಕೆ ಪರಿವರ್ತಿಸುವುದರ ಬಗ್ಗೆ.
2. ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, 1997ರಡಿ ನೋಂದಾಯಿಸಲು ಉದ್ದೇಶಿಸಲಾದ ಸಂಖ್ಯೆ 1 ರಿಂದ.......ರ ವರೆಗಿನ ಉಪವಿಧಿಗಳನ್ನು ಒಪ್ಪಿಕೊಳ್ಳುವ ಬಗ್ಗೆ.

ಈ ವಿಷಯಗಳು ನಿಮ್ಮ ಸಾಮಾನ್ಯ ಸಭೆ ಅಥವಾ ವಿಶೇಷ ಸರ್ವಸದಸ್ಯರ ಸಭೆಯಲ್ಲಿ ನಿಮ್ಮ ಪ್ರಸ್ತುತ ಇರುವ ಉಪವಿಧಿಯಂತೆ ಕನಿಷ್ಠ ಕೋರಂ ಇದ್ದು, ಇಂತಹ ನಿರ್ಣಯವು ಮೂರನೇ ಎರಡರಷ್ಟು ಸದಸ್ಯರ ಬಹುಮತದೊಂದಿಗೆ ಪಾಸಾದಲ್ಲಿ ನೀವು ಸೌಹಾರ್ದ ಸಹಕಾರಿಯಾಗಬಹುದು.

ಅಗತ್ಯ ಕಾಗದ ಪತ್ರಗಳಿಗೆ ಸಹಿ ಮಾಡಿ ನಿಮ್ಮ ಸಹಕಾರ ಸಂಘ/ಬ್ಯಾಂಕನ್ನು ಸೌಹಾರ್ದ ಕಾಯ್ದೆಯಡಿ ಪರಿವರ್ತನೆ ಮಾಡಲು ನಿಮ್ಮ ಮುಖ್ಯ ಕಾರ್ಯನಿರ್ವಹಣಾಧಿಕಾರಿಗೆ ಅಧಿಕಾರ ನೀಡಿ, ನಿಗದಿತ ಅರ್ಜಿಯನ್ನು ನಿಮ್ಮ ಕಾರ್ಯಾಚರಣೆಯ ಪ್ರದೇಶಕ್ಕೆ ಸಂಬಂಧಿಸಿದ ಸಹಕಾರಿಗಳ ನಿಬಂಧಕರಿಗೆ ಸಲ್ಲಿಸಬೇಕು.

ಸೌಹಾರ್ದ ಸಹಕಾರಿಯಾಗಲು ಅರ್ಜಿ ಸಲ್ಲಿಸುವ ಬಗ್ಗೆ :

ಅರ್ಜಿಯನ್ನು ನಿಮ್ಮ ಸಹಕಾರಿಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು ಸಲ್ಲಿಸಬೇಕು. ಅದರೊಂದಿಗೆ ಸಲ್ಲಿಸಬೇಕಾದ ದಾಖಲೆಗಳು:–

ಅ. ಪರಿವರ್ತನೆಯ ವಿಷಯ ಚರ್ಚಿಸಲು ಕರೆದ ಸಾಮಾನ್ಯ ಸಭೆಯ ನೋಟೀಸು.

ಆ. ಸಾಮಾನ್ಯ ಸಭೆಯ ಹಾಜರಾತಿ ಪುಸ್ತಕ ಮತ್ತು ನಡವಳಿಕೆಗಳ ಧೃಢೀಕತ ನಕಲು.

ಇ. ಇತ್ತೀಚೆನ ವರ್ಷದ ಲೆಕ್ಕ ಪರಿಶೋಧನೆಯಾದ ಲಾಭ–ಹಾನಿ ಹಾಗೂ ಅಢಾವೆ ಪತ್ರಿಕೆ.

ಈ. ಸರಕಾರದಿಂದ ಹಾಗೂ ಯಾವುದೇ ಸಹಕಾರ ಸಂಘಗಳಿಂದ ಯಾವುದೇ ರೀತಿಯ ಶೇರು, ಸಾಲ ಹಾಗೂ ಗ್ಯಾರಂಟಿ ಪಡೆದಿಲ್ಲವೆನ್ನುವ ಲೆಕ್ಕ ಪರಿಶೋಧಕರ ಪ್ರಮಾಣ ಪತ್ರ ಮತ್ತು ಡಿಸಿಸಿ ಬ್ಯಾಂಕಿನಿಂದ ಬೇಬಾಕಿ ಪತ್ರ.

ಉ. ತಮ್ಮ ಸಹಕಾರ ಸಂಘ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ, 1959ರಡಿ ನೋಂದಣಿಯಾದ ಮೂಲ ನೋಂದಣಿ ಪತ್ರ ಹಾಗೂ ಕಾಲ ಕಾಲಕ್ಕೆ ತಿದ್ದುಪಡಿಯಾದ ಮೂಲ ಉಪವಿಧಿ.

ಊ. ಪ್ರಸ್ತುತ ಇರುವ ನಿರ್ದೇಶಕರುಗಳ ಹೆಸರು, ವಿಳಾಸ ವೃತ್ತಿ, ವಯಸ್ಸು ಹಾಗೂ ಅವರಿಂದ ಸಂಘಕ್ಕೆ ಬರಬೇಕಾದ ಸಾಲಗಳ ವಿವರಗಳಿರುವ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸಹಿ ಮಾಡಿರುವ ಪಟ್ಟಿ.

ಋ. ಸಾಮಾನ್ಯ ಸಭೆ ಅನುಮೋದಿಸಿದ ಉಪವಿಧಿಯ 5 ಪ್ರತಿಗಳು, ಎಲ್ಲ ಐದು ಪ್ರತಿಗಳ ಪ್ರತಿ ಪುಟಕ್ಕೆ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹಾಗೂ ಕೊನೆಯ ಪುಟಕ್ಕೆ ಎಲ್ಲಾ ನಿರ್ದೇಶಕರೂ ಸಹಿ ಮಾಡಿರಬೇಕು.

ಇಷ್ಟು ದಾಖಲೆಗಳೊಂದಿಗೆ ನಿಮ್ಮ ಅಧಿಕೃತ ಶೇರು ಬಂಡವಾಳದ ಶೇ. 1 ರಷ್ಟು, (ಕನಿಷ್ಟ ರೂ. 500/– ಹಾಗೂ ಗರಿಷ್ಟ ರೂ. 5000/–) ನೋಂದಣಿ ಶುಲ್ಕವನ್ನು ಸರಕಾರಿ ಖಜಾನೆಗೆ ತುಂಬಿ, ಚಲನ್‌ನಿಗೆ ಪ್ರತಿಯನ್ನು ನಿಮ್ಮ ಸಹಕಾರಿಗೆ ಸಂಬಂಧಿಸಿದ ನಿಬಂಧಕರಿಗೆ ಸಲ್ಲಿಸಬೇಕು. ನಿಬಂಧಕರು ನಿಮ್ಮ ಅರ್ಜಿಯನ್ನು ಪರಿಶೀಲಿಸಿ, ಅಗತ್ಯವಿರುವ ಇತರೆ ಮಾಹಿತಿಯನ್ನು ನಿಮ್ಮಿಂದ ಪಡೆದು, ಗರಿಷ್ಠ 90 ದಿನದಲ್ಲಿ ನಿಮ್ಮ ಸಹಕಾರಿ ಸಂಘವನ್ನು ಸೌಹಾರ್ದ ಕಾಯ್ದೆಯಡಿ ಪರಿವರ್ತಿಸಿ ನೊಂದಣಿ ಮಾಡಿ ಕೊಡುತ್ತಾರೆ.

ಪರಿವರ್ತನೆಯ ನಂತರ :

ನಿಮ್ಮ ಸಹಕಾರ ಸಂಘವನ್ನು ಸೌಹಾರ್ದ ಕಾಯ್ದೆಯಡಿ ಪರಿವರ್ತನೆಯಾದ ಕೂಡಲೇ ಈ ಕೆಳಗಿನ ಮಾಹಿತಿಯೊಂದಿಗೆ ಸಂಯುಕ್ತ ಸಹಕಾರಿಯ ಕಛೇರಿಯನ್ನು ಸಂಪರ್ಕಿಸಿ ಹಾಗೂ ಹೆಚ್ಚಿನ ಮಾಹಿತಿ ಪಡೆಯಿರಿ.

1. ನೋಂದಣಿ ಆದೇಶ.
2. ಸಹಕಾರಿಯ ವಿಳಾಸ, ದೂರವಾಣಿ.
3. ಪ್ರಸ್ತುತ ಆಡಳಿತ ಮಂಡಳಿ ಸದಸ್ಯರ ಹೆಸರು, ವಿಳಾಸ, ಆಡಳಿತ ಮಂಡಳಿ ಚುನಾವಣೆ ನಡೆದ ದಿನಾಂಕ ಹಾಗೂ ಪದಾವಧಿ.
4. ಇತ್ತೀಚಿನ ಪರಿಶೋಧಿತ ಲೆಕ್ಕ ಪತ್ರ ವಿವರ.

ಗಮನಿಸಿ :

ಮಾದರಿ ಉಪವಿಧಿಗಳಿಗಾಗಿ ಸಂಯುಕ್ತ ಸಹಕಾರಿಯ ಕಛೇರಿಯನ್ನು ಸಂಪರ್ಕಿಸಿ

ಸೌಹಾರ್ದ ಸಹಕಾರಿ ಪರಿವಾರಕ್ಕೆ ನಿಮಗೆ ಹಾರ್ದಿಕ ಸ್ವಾಗತ

10. ಯುವ ಸಹಕಾರಿಗಳಿಗೆ ಮಾಹಿತಿ

ಯುವಕರು ಸಹಕಾರ ಕ್ಷೇತ್ರಕ್ಕೆ ಯಾಕೇ ಬರಬೇಕು ?

ಯುವಕರು ಸಹಕಾರ ಕ್ಷೇತ್ರಕ್ಕೆ ಬರಲು ಹಲವು ಕಾರಣಗಳಿವೆ. ಸಹಕಾರ ಕ್ಷೇತ್ರವು ಸಾಮೂಹಿಕತೆ, ಸಮಾನತೆ ಹಾಗೂ ಸಾಮಾಜಿಕ ಪ್ರಗತಿಯನ್ನು ಉತ್ತೇಜಿಸುತ್ತದೆ. ಇಲ್ಲಿದೆ ಕೆಲ ಪ್ರಮುಖ ಕಾರಣಗಳು:

1. ಸಾಮಾಜಿಕ ಪ್ರಗತಿ ಮತ್ತು ಸಮಾನತೆ :

ಸಹಕಾರ ಸಂಸ್ಥೆಗಳು ಲಾಭಕ್ಕಿಂತಲೂ ಜನಸಾಮಾನ್ಯರ ಚಿಂತನೆಯನ್ನು ಮುಖ್ಯವಾಗಿ ನೋಡುತ್ತವೆ. ಗ್ರಾಮೀಣ ಮತ್ತು ಅರ್ಪಣೀಯ ಸಮುದಾಯಗಳಿಗೆ ಬೆಳವಣಿಗೆ ಮತ್ತು ಸಬಲತೆ ನೀಡಲು ಸಹಕಾರ ಸಂಸ್ಥೆಗಳು ಉತ್ತಮ ವೇದಿಕೆ.

2. ಆರ್ಥಿಕ ಸ್ವಾವಲಂಬನೆ:

ಸಹಕಾರ ಸಂಸ್ಥೆಗಳು ಯುವಕರಿಗೆ ಉದ್ಯೋಗಾವಕಾಶಗಳು ಹಾಗೂ ಸ್ವಂತ ಆರ್ಥಿಕ ಸ್ವಾವಲಂಬನೆ ಸಾಧಿಸುವ ಮೂಲಕ ಭವಿಷ್ಯ ಕಟ್ಟಲು ನೆರವಾಗುತ್ತವೆ. ಬಡ್ಡಿಯಿಲ್ಲದ ಅಥವಾ ಕಡಿಮೆ ಬಡ್ಡಿಯ ಸಾಲ ವ್ಯವಸ್ಥೆ ಮೂಲಕ ಉದ್ಯಮಶೀಲತೆಯನ್ನು ಉತ್ತೇಜಿಸುತ್ತವೆ.

3. ಸಾಮೂಹಿಕತೆಯ ಶಕ್ತಿ:

ಸಹಕಾರ ಪದ್ಧತಿ ಗುಂಪು ಶಕ್ತಿಯನ್ನು ಬಳಸಿಕೊಂಡು ಉನ್ನತ ಪ್ರಗತಿ ಸಾಧಿಸಲು ಸಹಾಯ ಮಾಡುತ್ತದೆ. ಜನಪ್ರತಿನಿಧಿತ್ವ ಮತ್ತು ಸಮಾನ ಸುತ್ತೋಣಿಕೆಯ ಮೂಲಕ ನಿರ್ವಹಣಾ ಕೌಶಲ್ಯಗಳು ಅಭಿವೃದ್ಧಿಯಾಗುತ್ತವೆ.

4. ನೈತಿಕತೆ ಮತ್ತು ಮೌಲ್ಯಪ್ರಜ್ಞೆ:

ಸಹಕಾರ ಸಂಸ್ಥೆಗಳು ನೈತಿಕ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತವೆ, ಇದು ಯುವಕರಿಗೆ ಸಮಾಜಕ್ಕೆ ಉಪಯೋಗಿಯಾಗುವಂತೆ ಕೆಲಸ ಮಾಡುವ ಗುಣವನ್ನು ನೀಡುತ್ತದೆ. ಸಾಮಾಜಿಕ ಸೇವೆಯ ಮೂಲಕ ತೃಪ್ತಿ ಮತ್ತು ನೈತಿಕತೆಯನ್ನು ಅನುಭವಿಸಬಹುದು.

5. ಸಹಕಾರ ಕ್ಷೇತ್ರದಲ್ಲಿ ಹೊಸ ವಿಚಾರ ಸಂಕಲ್ಪಗಳ ಪ್ರಾತ್ಯಕ್ಷಿಕೆ:

ಯುವಕರು ಹೊಸ ತಂತ್ರಜ್ಞಾನ ಮತ್ತು ಹೊಸ ಆವಿಷ್ಕಾರಗಳನ್ನು ಸಹಕಾರ ಕ್ಷೇತ್ರದಲ್ಲಿ ಜೋಡಿಸುವ ಮೂಲಕ ಸಂಸ್ಥೆಗಳನ್ನು ಆಧುನಿಕಗೊಳಿಸಬಹುದು. ರೈತರಿಂದ ಕಿರು ಉದ್ದಿಮೆಗಳವರೆಗೆ, ಸಹಕಾರ ಸಂಸ್ಥೆಗಳ ವ್ಯಾಪ್ತಿಯನ್ನು ವಿಸ್ತರಿಸಬಹುದು.

6. ಮೂಲಭೂತ ಅಗತ್ಯಗಳನ್ನು ಪೂರೈಸುವ ವೇದಿಕೆ:

ಶಿಕ್ಷಣ, ಆರೋಗ್ಯ, ವಸತಿ ಮತ್ತು ಬ್ಯಾಂಕಿಂಗ್ ಇತ್ಯಾದಿ ಮೂಲಭೂತ ಸೇವೆಗಳಲ್ಲಿ ಸಹಕಾರ ಸಂಸ್ಥೆಗಳ ಪಾತ್ರ ಅತ್ಯಂತ ಮಹತ್ವದಾಗಿದೆ. ಯುವಕರು ಈ ಸೇವೆಗಳಲ್ಲಿ ತೊಡಗಿಸಿಕೊಳ್ಳುವ ಮೂಲಕ ಗ್ರಾಮೀಣ ಭಾಗಗಳಲ್ಲಿ ಬದಲಾವಣೆ ತರಬಹುದು.

ಯುವಜನಾಂಗದ ತಾಜಾ ಚಿಂತನೆಗಳು, ಉತ್ಸಾಹ ಮತ್ತು ಇನೋವೇಷನ್ ಸಹಕಾರ ಕ್ಷೇತ್ರದ ಪ್ರಗತಿಗೆ ಬಲವಾಗುತ್ತವೆ. ಸಹಕಾರ ತತ್ವದಲ್ಲಿ ದೀರ್ಘಕಾಲಿಕ ಮತ್ತು ಶ್ರೇಯೋಭಿವೃದ್ಧಿ ಆಧಾರಿತ ಸಮುದಾಯ ನಿರ್ಮಾಣದ ಸಾಧ್ಯತೆ ಹೆಚ್ಚು.

ಸಹಕಾರ ಕ್ಷೇತ್ರದಲ್ಲಿನ ಉದ್ಯೋಗ ಅವಕಾಶಗಳು :

ಸಹಕಾರ ಕ್ಷೇತ್ರವು ವಿವಿಧ ಪ್ರಕಾರದ ಉದ್ಯೋಗ ಮತ್ತು ಉದ್ಯಮಾವಕಾಶಗಳನ್ನು ಒದಗಿಸುತ್ತದೆ. ಇದು ಕೇವಲ ಬ್ಯಾಂಕಿಂಗ್ ಅಥವಾ ಹಣಕಾಸು ಕ್ಷೇತ್ರಕ್ಕೆ ಮಾತ್ರ ಸೀಮಿತವಾಗಿಲ್ಲ; ಕೃಷಿ, ವಾಣಿಜ್ಯ, ಆರೋಗ್ಯ, ಶಿಕ್ಷಣ, ತಂತ್ರಜ್ಞಾನ ಮುಂತಾದ ಕ್ಷೇತ್ರಗಳಲ್ಲಿಯೂ ವ್ಯಾಪಿಸಿರುವುದು. ಇಲ್ಲಿವೆ ಸಹಕಾರ ಕ್ಷೇತ್ರದಲ್ಲಿ ದೊರೆಯುವ ಪ್ರಮುಖ ಉದ್ಯೋಗ ಅವಕಾಶಗಳು:

1. ಬ್ಯಾಂಕಿಂಗ್ ಮತ್ತು ಹಣಕಾಸು ಕ್ಷೇತ್ರ:

ಸಹಕಾರಿ ಬ್ಯಾಂಕ್:

ಕ್ಲರ್ಕ್, ವ್ಯವಸ್ಥಾಪಕರು ಮತ್ತು ಕ್ರೆಡಿಟ್ ಅಧಿಕಾರಿ ಹುದ್ದೆಗಳು. ಸಾಲ ಮತ್ತು ಬಂಡವಾಳ ನಿರ್ವಹಣೆ, ಲಾಭ ಹಂಚಿಕೆ, ಮತ್ತು ಗ್ರಾಹಕ ಸೇವೆಯಲ್ಲಿ ಹುದ್ದೆಗಳು. ಗ್ರಾಮೀಣ ಸಾಲ ಕೊಡುವ ಪ್ರಕ್ರಿಯೆಗಳಲ್ಲಿ ನಿರ್ವಹಣಾ ಹುದ್ದೆಗಳು.

2. ಕೃಷಿ ಮತ್ತು ಹೈನುಗಾರಿಕೆ:

ಹೈನುಗಾರಿಕಾ ಸಹಕಾರಿ ಸಂಸ್ಥೆಗಳು:

ಹಾಲು ಉತ್ಪಾದನೆ, ಸಂಗ್ರಹಣೆ ಮತ್ತು ಮಾರುಕಟ್ಟೆ ನವೀನತೆಯ ನಿರ್ವಹಣಾ ಹುದ್ದೆಗಳು. ಆಹಾರ ಪ್ರಕ್ರಿಯಾವಳಿ ತಂತ್ರಜ್ಞಾನ ಮತ್ತು ಲಾಜಿಸ್ಟಿಕ್ಸ್ ಹುದ್ದೆಗಳು.

ಕೃಷಿ ಸಹಕಾರ ಸಂಘಗಳು:

ಬೆಳೆ ಮಾರಾಟ, ಬೀಜ ವಿತರಣಾ ನಿರ್ವಹಣೆ ಮತ್ತು ಕೃಷಿ ತಂತ್ರಜ್ಞಾನ ಸೇವೆಗಳಲ್ಲಿ ಹುದ್ದೆಗಳು.

3. ಮಾರುಕಟ್ಟೆ ಮತ್ತು ವಾಣಿಜ್ಯ:

ಗ್ರಾಹಕ ಸಹಕಾರ ಸಂಸ್ಥೆಗಳು:

ಮಾರುಕಟ್ಟೆ ವಿಶ್ಲೇಷಣೆ, ಇ–ಕಾಮರ್ಸ್ ನಿರ್ವಹಣೆ ಮತ್ತು ಪೂರೈಕೆ ಶ್ರೇಣಿಯ ವ್ಯವಸ್ಥಾಪಕ.

ವ್ಯಾಪಾರ ಸಹಕಾರ:

ಬ್ಯಾಂಡ್ ಅಭಿವೃದ್ಧಿ, ಮಾರುಕಟ್ಟೆ ನಿಟ್ಟಿನ ತಂತ್ರಜ್ಞಾನಗಳು ಮತ್ತು ಲಾಜಿಸ್ಟಿಕ್ಸ್ ನಿರ್ವಹಣೆ.

4. ಶಿಕ್ಷಣ ಮತ್ತು ತರಬೇತಿ:

ಸಹಕಾರಿ ಶಿಕ್ಷಣ ಸಂಸ್ಥೆಗಳು:

ಶಿಕ್ಷಣ ಕ್ಷೇತ್ರದಲ್ಲಿ ಆಡಳಿತ ಮತ್ತು ಶಿಕ್ಷಕರ ಹುದ್ದೆಗಳು. ತರಬೇತಿ ಕಾರ್ಯಕ್ರಮಗಳು ಮತ್ತು ಸದಸ್ಯರ ಜಾಗೃತಿ ಕಾರ್ಯಕ್ರಮಗಳ ಆಯೋಜನೆ.

5. ಆರೋಗ್ಯ ಮತ್ತು ಸೇವಾ ಕ್ಷೇತ್ರ:

ಆರೋಗ್ಯ ಸಹಕಾರಿ ಸಂಸ್ಥೆಗಳು:

ಆಸ್ಪತ್ರೆಗಳ ಆಡಳಿತ, ವೈದ್ಯಕೀಯ ಸಂಶೋಧನೆ ಮತ್ತು ರೋಗಪೀಡಿತರಿಗೆ ಸೇವೆ.

ಸಮಾಜ ಸೇವಾ ಸಹಕಾರ:

ಗ್ರಾಮೀಣ ಆರೋಗ್ಯ ಸೇವೆಗಳ ನಿರ್ವಹಣೆ.

6. ತಂತ್ರಜ್ಞಾನ ಮತ್ತು ಆಧುನಿಕ ಕ್ಷೇತ್ರಗಳು:

ಡಿಜಿಟಲ್ ಪ್ಲಾಟ್‌ಫಾರ್ಮ್ ಮತ್ತು ಡೇಟಾ ನಿರ್ವಹಣೆ:

ಸಹಕಾರ ಸಂಸ್ಥೆಗಳ ಆಧುನಿಕೀಕರಣಕ್ಕಾಗಿ ತಂತ್ರಜ್ಞಾನ ತಜ್ಞರ ಹುದ್ದೆಗಳು. ಡೇಟಾ ವಿಶ್ಲೇಷಣೆ, ಸಾಫ್ಟ್‌ವೇರ್ ಡೆವಲಪರ್ ಮತ್ತು ಸೈಬರ್ ಸುರಕ್ಷಾ ಹುದ್ದೆಗಳು.

7. ವಿಕಸನ ಮತ್ತು ಯೋಜನೆ:

ಸಹಕಾರಿ ಯೋಜನಾ ಸಂಘಗಳು:

ಸಾಮಾಜಿಕ ಯೋಜನೆಗಳ ರಚನೆ, ಕಾರ್ಯೋನ್ಮುಖತೆ ಮತ್ತು ಆಡಳಿತ ಹುದ್ದೆಗಳು.

ಗ್ರಾಮೀಣಾಭಿವೃದ್ಧಿ ಯೋಜನೆಗಳು:

ಸಂಶೋಧನೆ ಮತ್ತು ಅಭಿವೃದ್ಧಿ, ಮಹಿಳಾ ಸಬಲತೆ ಮತ್ತು ಪುನರ್ವಸತಿ ಯೋಜನೆಗಳಲ್ಲಿ ತೊಡಗಿಸಿಕೊಳ್ಳುವ ಅವಕಾಶಗಳು.

8. ಉದ್ಯಮಶೀಲತೆ ಮತ್ತು ಸ್ವ–ಉದ್ಯೋಗ:

ಸಹಕಾರ ಕ್ಷೇತ್ರದಲ್ಲಿ ಯುವಕರಿಗೆ ತಮ್ಮದೇ ಆದ ಚಿಕ್ಕ ಉದ್ಯಮ ಆರಂಭಿಸಲು ಬಡ್ಡಿಯಿಲ್ಲದ ಸಾಲಗಳ ಸೌಲಭ್ಯ. ಸ್ವಂತ

ಉತ್ಪಾದಕ ಕಂಪನಿಗಳು ಅಥವಾ ಸೇವಾ ಸಂಸ್ಥೆಗಳ ಆರಂಭ.

ಸಹಕಾರ ಕ್ಷೇತ್ರವು ವ್ಯಾಪಕ ಆಯಾಮ ಹೊಂದಿದ್ದು, ಇದು ಯುವಕರಿಗೆ ಕೌಶಲ್ಯ ಮತ್ತು ಉತ್ಸಾಹವನ್ನು ಬಳಸಿಕೊಂಡು ಭವಿಷ್ಯದ ಪ್ರಗತಿಗೆ ಮಹತ್ವದ ಪಾತ್ರವನ್ನು ವಹಿಸಲು ವೇದಿಕೆ ಒದಗಿಸುತ್ತದೆ.

ಸಹಕಾರದಿಂದ ಸಮೃದ್ಧಿ:

ಸಹಕಾರದಿಂದ ಸಮೃದ್ಧಿ ಎಂಬ ಪರಿಕಲ್ಪನೆ ಸಹಕಾರ ತತ್ವದ ಮೌಲ್ಯಗಳನ್ನು ಪ್ರಸ್ತಾಪಿಸುತ್ತಾ, ಸಾಮೂಹಿಕ ಶ್ರಮದಿಂದ ಸಾಮಾನ್ಯ ಪ್ರಜ್ಞೆ ಮತ್ತು ಆರ್ಥಿಕ ಪ್ರಗತಿಯನ್ನು ಸಾಧಿಸುವ ಆಧಾರವನ್ನು ಸೂಚಿಸುತ್ತದೆ. ಇದಕ್ಕೆ ಕೆಲ ಪ್ರಮುಖ ಅಂಶಗಳನ್ನು ಕಂಡುಹಿಡಿಯಬಹುದು:

1. ಸಾಮೂಹಿಕ ಶಕ್ತಿ ಮತ್ತು ಸಮಾನತೆ:

ಸಹಕಾರ ವ್ಯವಸ್ಥೆಗಳಲ್ಲಿ ಪ್ರತಿ ಸದಸ್ಯನಿಗೂ ಸಮಾನ ಹಕ್ಕುಗಳು ಇರುತ್ತವೆ. "ಒಬ್ಬ ವ್ಯಕ್ತಿ, ಒಂದು ಮತ" ಎಂಬ ತತ್ವವು ನಿರ್ಧಾರ ಪ್ರಕ್ರಿಯೆಯಲ್ಲಿ ಸಮಾನತೆಯನ್ನು ಒದಗಿಸುತ್ತದೆ. ಇದು ವರ್ಗಗಳ ನಡುವೆ ಭೇದವನ್ನು ಕಡಿಮೆ ಮಾಡುತ್ತಾ ಆರ್ಥಿಕ ಸಮಾನತೆಯನ್ನು ಸಾಧಿಸಲು ಸಹಕಾರಿಯಾಗುತ್ತದೆ.

2. ಆರ್ಥಿಕ ಸ್ವಾವಲಂಬನೆ:

ಬಡ್ಡಿರಹಿತ ಸಾಲಗಳು: ರೈತರು, ಸಣ್ಣ ಉದ್ಯಮಿಗಳು ಮತ್ತು ಮಹಿಳಾ ಸಮುದಾಯಗಳು ಸಹಕಾರದ ಮೂಲಕ ತಮ್ಮ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಿಕೊಳ್ಳಲು ಸಾಧ್ಯವಾಗುತ್ತದೆ.

ಉತ್ಪಾದನೆ ಮತ್ತು ಮಾರುಕಟ್ಟೆ: ಹಾಲು, ಕೃಷಿ ಉತ್ಪನ್ನಗಳು ಮತ್ತು ಕೈಗಾರಿಕಾ ಉತ್ಪಾದನೆಗಳ ಸಮೂಹ ಮಾರಾಟದಿಂದ ಉತ್ತಮ ಆದಾಯವನ್ನು ಸಾಧಿಸಬಹುದು.

3. ಗ್ರಾಮೀಣಾಭಿವೃದ್ಧಿ:

ಸಹಕಾರ ಸಂಘಗಳು ಗ್ರಾಮೀಣ ಭಾಗದಲ್ಲಿ ಮೂಲಭೂತ ಸೌಲಭ್ಯಗಳನ್ನು ಒದಗಿಸುತ್ತವೆ, ಜಾಗೃತಿ ಮೂಡಿಸುತ್ತವೆ ಮತ್ತು ಹಸುವಿನ ಹಾಲು ಸಂಗ್ರಹಣೆ, ಚಿಕ್ಕ ಕೈಗಾರಿಕೆ ಹಾಗೂ ದಿನಸಿ ಪೂರೈಕೆಗಳಂತಹ ಸೇವೆಗಳನ್ನು ಸುಗಮಗೊಳಿಸುತ್ತವೆ. ಗ್ರಾಮೀಣ ಸ್ತ್ರೀಯರು ಮತ್ತು ಯುವಕರಿಗೆ ಉದ್ಯೋಗಾವಕಾಶಗಳನ್ನು ಕಲ್ಪಿಸುತ್ತವೆ.

4. ಜಾಗತೀಕರಣದಲ್ಲಿ ನಿಲ್ಲುವ ಶಕ್ತಿ:

ಸಹಕಾರ ಸಂಘಗಳು ತಮ್ಮ ಸದಸ್ಯರಿಗೆ ಆಂತರಿಕ ಮಾರುಕಟ್ಟೆಯಲ್ಲಿ ಮಾತ್ರವಲ್ಲ, ಜಾಗತಿಕ ಮಟ್ಟದಲ್ಲಿಯೂ ಮಾರಾಟ ಮಾಡಲು ಸಹಾಯ ಮಾಡುತ್ತವೆ. ಸಮೂಹ ಶ್ರೇಣಿಯ ಖರೀದಿಯಿಂದ ವೆಚ್ಚವನ್ನು ಕಡಿಮೆ ಮಾಡುತ್ತವೆ ಮತ್ತು ಮೌಲ್ಯವರ್ಧಿತ ಉತ್ಪನ್ನಗಳ ಸೃಷ್ಟಿಗೆ ಉತ್ತೇಜನ ನೀಡುತ್ತವೆ.

5. ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ:

ಸಹಕಾರ ಸಂಘಗಳು ತಮ್ಮ ಸದಸ್ಯರಿಗೆ ಆರ್ಥಿಕ ನಿರ್ವಹಣಾ ಶಿಕ್ಷಣ, ಉದ್ಯಮಶೀಲತೆಯ ತರಬೇತಿ ಮತ್ತು ತಂತ್ರಜ್ಞಾನ ಬೋಧನೆ ಮೂಲಕ ಉನ್ನತ ಆರ್ಥಿಕ ಜಾಗೃತಿ ನೀಡುತ್ತವೆ. ನೂತನ ತಂತ್ರಜ್ಞಾನಗಳ ಬಳಕೆ ಮತ್ತು ಆಧುನಿಕ ಮಾರುಕಟ್ಟೆ ತಂತ್ರಗಳನ್ನು ಬಳಸಲು ಸಹಾಯ ಮಾಡುತ್ತವೆ.

6. ಪ್ರಜಾಪ್ರಭುತ್ವ ಮತ್ತು ಸಮುದಾಯ ಬಲ:

ಪ್ರಜಾಪ್ರಭುತ್ವಾತ್ಮಕ ನಿರ್ವಹಣೆಯ ಮೂಲಕ ಸದಸ್ಯರ ನಡುವೆ ಜವಾಬ್ದಾರಿಯ ಭಾವನೆ ಬೆಳೆಸುತ್ತವೆ. ಸಹಕರಿಸುವ ಮನೋಭಾವವು ಸಮಾಜದಲ್ಲಿ ಶಾಂತಿ, ಬಾಂಧವ್ಯ ಮತ್ತು ಪ್ರಗತಿಯನ್ನು ಉತ್ತೇಜಿಸುತ್ತದೆ.

7. ಸತತ ಮತ್ತು ನೈತಿಕ ಅಭಿವೃದ್ಧಿ:

ಪರಿಸರ ಸ್ನೇಹಿ ವಿಧಾನಗಳನ್ನು ಅನುಸರಿಸುತ್ತಾ ನೈಸರ್ಗಿಕ ಸಂಪತ್ತಿನ ಉಳಿವಿಗೆ ಸಹಾಯ ಮಾಡುತ್ತವೆ. ಸತತ ಆರ್ಥಿಕ ಬೆಳವಣಿಗೆಗಾಗಿಯೂ ಅನುಕೂಲಕರವಾಗಿರುತ್ತವೆ.

ಉದಾಹರಣೆಗಳು:

ಅಮೂಲ (AMUL): ಹಾಲು ಉತ್ಪಾದಕರ ಸಹಕಾರ ಸಂಘದ ಮೂಲಕ ಲಕ್ಷಾಂತರ ರೈತರಿಗೆ ಆರ್ಥಿಕ ಸ್ವಾವಲಂಬನೆ ಮತ್ತು ಉತ್ತಮ ಆದಾಯ.

ಇಫ್ಕೋ (IFFCO): ಕೃಷಿ ಕ್ಷೇತ್ರದಲ್ಲಿ ಸಹಕಾರದ ಮೂಲಕ ಉತ್ತಮ ರಸಗೊಬ್ಬರ ಪೂರೈಕೆ.

ಸಹಕಾರಿ ಬ್ಯಾಂಕುಗಳು: ಶ್ರೇಯೋಭಿವೃದ್ಧಿಗೆ ಸಾಲ, ಬಡ್ಡಿ ಉಳಿತಾಯ ಮತ್ತು ನವೀನ ಯೋಜನೆಗಳು.

ಸಾರಾಂಶ:

ಸಹಕಾರದಿಂದ ಸಮೃದ್ಧಿ ಎಂಬುದು ಕೇವಲ ಆರ್ಥಿಕ ಉತ್ಕರ್ಷವಷ್ಟೇ ಅಲ್ಲ, ಬದಲಾಗಿ, ಸಾಮಾಜಿಕ ಒಗ್ಗಟ್ಟು, ಸಮಾನತೆ, ಮತ್ತು ಸತತ ಅಭಿವೃದ್ಧಿಯ ದಾರಿಯಾಗಿದೆ. ಇದು ಸಮುದಾಯದ ಎಲ್ಲಾ ಸದಸ್ಯರ ಭರವಸೆಯನ್ನು ಪೂರೈಸಿ, ನಿತ್ಯ ಜೀವನದ ಗುಣಮಟ್ಟವನ್ನು ಉತ್ತೇಜಿಸಲು ಸಹಕಾರಿಯಾಗಿದೆ.

ರಾಜ್ಯದ/ದೇಶದ ಪ್ರತಿಷ್ಠಿತ ಸಹಕಾರ ಸಂಸ್ಥೆಗಳ ಬಗ್ಗೆ ಮಾಹಿತಿ :

ಭಾರತ ಮತ್ತು ಕರ್ನಾಟಕ ರಾಜ್ಯದಲ್ಲಿ ಹಲವು ಪ್ರಮುಖ ಸಹಕಾರ ಸಂಸ್ಥೆಗಳು ವಿವಿಧ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿವೆ. ಈ ಸಂಸ್ಥೆಗಳು ತಮ್ಮ ಕ್ಷೇತ್ರಗಳಲ್ಲಿ ಅತ್ಯುತ್ತಮ ಸೇವೆಗಳನ್ನು ಒದಗಿಸಿ ಸಹಕಾರ ತತ್ವದ ಮೂಲಕ ಸಾಮಾಜಿಕ ಮತ್ತು ಆರ್ಥಿಕ ಪ್ರಗತಿಗೆ ಮುನ್ನುಡಿಯಾಗಿವೆ. ಇವುಗಳಲ್ಲಿ ಪ್ರಮುಖವಾದವುಗಳ ಬಗ್ಗೆ ಇಲ್ಲಿದೆ ಮಾಹಿತಿ:

ಕರ್ನಾಟಕದಲ್ಲಿ ಪ್ರಮುಖ ಸಹಕಾರ ಸಂಸ್ಥೆಗಳು:

1. ಕೃಷಿ ಕ್ಷೇತ್ರ:

ಕರ್ನಾಟಕ ಮಿಲ್ಕ್ ಫೆಡರೇಷನ್ (KMF):

ಸಹಕಾರಿ ಹಾಲು ಉತ್ಪಾದಕರ ಸಂಸ್ಥೆ.

ಬ್ರಾಂಡ್: ನಂದಿನಿ.

ಇದು ರೈತರಿಗೆ ಹಾಲು ಮಾರಾಟದ ಮೂಲಕ ಖಚಿತ ಆದಾಯವನ್ನು ನೀಡುತ್ತಿದೆ.

ಕರ್ನಾಟಕ ರಾಜ್ಯ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್:

ಗ್ರಾಮೀಣ ಅಭಿವೃದ್ಧಿ ಯೋಜನೆಗಳಿಗೆ ಮತ್ತು ರೈತರಿಗೆ ಸಾಲಗಳನ್ನು ಒದಗಿಸುತ್ತದೆ.

2. ಬ್ಯಾಂಕಿಂಗ್ ಮತ್ತು ಹಣಕಾಸು:

ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ (Apex Bank):

ಸಹಕಾರಿ ಸಂಘಗಳ ಪ್ರಮುಖ ಆರ್ಥಿಕ ಬಳಕೆಕೋಶ.

ಗ್ರಾಮೀಣ ಸಹಕಾರಿ ಬ್ಯಾಂಕುಗಳಿಗೆ ಆರ್ಥಿಕ ಬೆಂಬಲ.

ವಿಶ್ವೇಶ್ವರ ಸಹಕಾರಿ ಬ್ಯಾಂಕ್:

ಕೃಷಿ ಮತ್ತು ನಗರಾಭಿವೃದ್ಧಿ ಯೋಜನೆಗಳಿಗೆ ಹಣಕಾಸು ನೆರವು.

3. ಆಹಾರ ಮತ್ತು ಕಚೇರಿ ವಸ್ತುಗಳು:

ಕರ್ನಾಟಕ ರಾಜ್ಯ ಗ್ರಾಹಕ ಸಹಕಾರಿ ಒಕ್ಕೂಟ (Karnataka State Cooperative Consumer Federation):

ಸಾರ್ವಜನಿಕರ ದಿನಸಿ ಮತ್ತು ಅವಶ್ಯಕ ವಸ್ತುಗಳ ಸರಬರಾಜು.

ಸಹಕಾರಿ ಹೈನುಗಾರಿಕೆ ಮತ್ತು ಮಾರುಕಟ್ಟೆ ಸಂಸ್ಥೆಗಳು:

ಈ ಸಂಸ್ಥೆಗಳು ಸ್ಥಳೀಯ ಉತ್ಪನ್ನಗಳನ್ನು ಮಾರುಕಟ್ಟೆ ಮಾಡುತ್ತವೆ.

4. ಶಿಕ್ಷಣ ಮತ್ತು ವೃತ್ತಿಪರ ತರಬೇತಿ:

ಕರ್ನಾಟಕ ಎಜುಕೇಶನ್ & ವೋಕೇಷನಲ್ ಟ್ರೈನಿಂಗ್ ಸೊಸೈಟಿಸ್ (KEVT):

ಶಿಕ್ಷಣ ಮತ್ತು ವೃತ್ತಿಪರ ತರಬೇತಿ ಸೇವೆಗಳಲ್ಲಿ ತನ್ನದೇ ಆದ ಛಾಪು ಮೂಡಿಸಿದೆ.

ಭಾರತದಲ್ಲಿ ಪ್ರತಿಷ್ಠಿತ ಸಹಕಾರ ಸಂಸ್ಥೆಗಳು:

1. ಕೃಷಿ ಮತ್ತು ರಸಗೊಬ್ಬರ:

ಇಫ್ಕೋ (IFFCO - Indian Farmers Fertiliser Cooperative):

ವಿಶ್ವದ ಅತಿದೊಡ್ಡ ರಸಗೊಬ್ಬರ ಉತ್ಪಾದಕರ ಸಹಕಾರಿ ಸಂಸ್ಥೆ.

ರೈತರಿಗೆ ಗುಣಮಟ್ಟದ ರಸಗೊಬ್ಬರವನ್ನು ಕಡಿಮೆ ಬೆಲೆಗೆ ಒದಗಿಸುತ್ತದೆ.

ಕ್ರಿಬ್‌ಕೋ (Krishak Bharati Cooperative Limited):

ರೈತರಿಗೆ ರಾಸಾಯನಿಕ ಗೊಬ್ಬರ ಪೂರೈಕೆ ಮತ್ತು ಶೇಖರಣಾ ಸೇವೆ.

2. ಹಾಲು ಉತ್ಪಾದನೆ:

ಅಮೂಲ (AMUL):

ಆನಂದ್ ಹಾಲು ಉತ್ಪಾದಕರ ಸಹಕಾರಿ ಸಂಘ.

ಭಾರತದ ಹಾಲು ದಾಸೋಹದಲ್ಲಿ ಪ್ರಮುಖ ಪಾತ್ರ, "ವೈಟ್ ರೆವಲ್ಯೂಶನ್"ಗೆ ಬೆನ್ನೆಲುಬು.

ಮದರ್ ಡೈರಿ:

ದೆಹಲಿಯ ಹಾಲು ಉತ್ಪಾದನೆ ಮತ್ತು ವಿತರಣೆ ಕ್ಷೇತ್ರದಲ್ಲಿ ಪ್ರಮುಖ ಸಹಕಾರಿ ಸಂಸ್ಥೆ.

3. ಬ್ಯಾಂಕಿಂಗ್:

ನಬಾರ್ಡ್ (NABARD - National Bank for Agriculture and Rural Development):

ಗ್ರಾಮೀಣಾಭಿವೃದ್ಧಿಗೆ ಸಂಬಂಧಿಸಿದ ಯೋಜನೆಗಳಿಗೆ ಹಣಕಾಸು ನೆರವು.

ಸಹಕಾರ ಬ್ಯಾಂಕುಗಳಿಗೆ ನಿರ್ವಹಣಾ ಸೌಲಭ್ಯ.

ಸಹಕಾರ ಅಪೆಕ್ಸ್ ಬ್ಯಾಂಕ್‌ಗಳು:

ಇವು ಪ್ರಾಂತ್ಯದ ಸಹಕಾರ ಸಂಘಗಳ ಆರ್ಥಿಕ ನೆರವಿಗಾಗಿ ಪ್ರಮುಖ ಕೇಂದ್ರ.

4. ಮಾರುಕಟ್ಟೆ:

ನೆಫೆಡ್ (NAFED - National Agricultural Cooperative Marketing Federation of India):

ಕೃಷಿ ಉತ್ಪನ್ನಗಳ ಮಾರುಕಟ್ಟೆ, ನಿಲುವು ಬೆಲೆ ಯೋಜನೆ ಮತ್ತು ಆರ್ಥಿಕ ಪ್ರೋತ್ಸಾಹ ನೀಡುವ ಸಂಸ್ಥೆ.

5. ಮಹಿಳಾ ಅಭಿವೃದ್ಧಿ:

ಸೇಲ್ಕೋ (Self Employed Women's Association - SEWA):

ಮಹಿಳಾ ಸ್ವಾವಲಂಬನೆಗೆ ಸಹಾಯ ಮಾಡುತ್ತಿರುವ ಪ್ರಮುಖ ಸಹಕಾರಿ ಯೋಜನೆ.

ಕೈಗಾರಿಕೆ, ಕೌಶಲ್ಯ ಅಭಿವೃದ್ಧಿ ಮತ್ತು ಆರ್ಥಿಕ ಸ್ವಾಯತ್ತತೆ.

ಮಹತ್ವ:

ಈ ಪ್ರತಿಷ್ಠಿತ ಸಹಕಾರ ಸಂಸ್ಥೆಗಳು ಕೇವಲ ಆರ್ಥಿಕ ಮುನ್ನೋಟವನ್ನು ಮಾತ್ರವಲ್ಲ, ಸಮುದಾಯದ ಸುಧಾರಣೆಗೆ ಮತ್ತು ಸಮಾನತೆಯನ್ನು ಸಾಧಿಸಲು ಸಹಕಾರ ತತ್ವವನ್ನು ಬೆಂಬಲಿಸುತ್ತವೆ. ಇವುಗಳ ಸಾಧನೆಗಳು "ಸಹಕಾರದಿಂದ ಸಮೃದ್ಧಿ" ಪರಿಕಲ್ಪನೆಯನ್ನು ಯಶಸ್ವಿಯಾಗಿ ಜೀವನಕ್ಕೆ ತಂದುಕೊಟ್ಟಿವೆ.

ಕ್ಯಾಂಪಸ್ ಕೋ–ಆಪ್‌ರೇಟಿವ್ ಏಕೆ ಬೇಕು ?

ಕ್ಯಾಂಪಸ್ ಕೋ–ಆಪರೇಟಿವ್ (Campus Co-operative) ಎಲಿಮೆಂಟರಿ ಮತ್ತು ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳಿಗೆ, ಉಪನ್ಯಾಸಕರಿಗೆ ಮತ್ತು ಸಿಬ್ಬಂದಿಗಳಿಗೆ ಬಹುಮುಖ ಸೌಲಭ್ಯಗಳನ್ನು ಒದಗಿಸುವ ಬಹಳ ಉಪಯುಕ್ತವಾದ

ವ್ಯವಸ್ಥೆಯಾಗಿರುತ್ತದೆ. ಇದನ್ನು ಸ್ಥಾಪಿಸುವುದಕ್ಕೆ ಹಲವಾರು ಕಾರಣಗಳಿವೆ:

1. ವಿದ್ಯಾರ್ಥಿಗಳ ಆರ್ಥಿಕ ಸಹಾಯ:

ಕ್ಯಾಂಪಸ್ ಕೋ–ಆಪರೇಟಿವ್ ಸಂಸ್ಥೆಗಳು ಕಡಿಮೆ ಬೆಲೆಗೆ ಪುಸ್ತಕಗಳು, ಸ್ಟೇಷನರಿ ಮತ್ತು ತಂತ್ರಜ್ಞಾನ ಸೌಲಭ್ಯಗಳನ್ನು ಒದಗಿಸುತ್ತವೆ. ವಿದ್ಯಾರ್ಥಿಗಳಿಗೆ ಶೂನ್ಯ ಬಡ್ಡಿಯ ಸಾಲ (zero-interest loans) ಅಥವಾ ಗುರಿ ನಿಧಿ ಸೇವೆಗಳನ್ನು ನೀಡಬಹುದು.

2. ಉದ್ಯೋಗ ಮತ್ತು ತರಬೇತಿ ಅವಕಾಶಗಳು:

ಕ್ಯಾಂಪಸ್ ಕೋ–ಆಪರೇಟಿವ್‌ಗಳು ಕಾರ್ಯನಿರ್ವಹಣೆಯಲ್ಲಿ ವಿದ್ಯಾರ್ಥಿಗಳನ್ನು ಸೇರಿಸುವ ಮೂಲಕ ಅವರಿಗೆ ಉದ್ಯೋಗಪರ ಅನುಭವ ಮತ್ತು ಕೌಶಲ್ಯಗಳನ್ನು ಕಲಿಸುತ್ತವೆ. ನಿದರ್ಶನವಾಗಿ, ಮಾರುಕಟ್ಟೆ ನಿರ್ವಹಣೆ, ಹಣಕಾಸು ನಿರ್ವಹಣೆ ಮತ್ತು ಗ್ರಾಹಕ ಸೇವೆಗಳಲ್ಲಿ ವಿದ್ಯಾರ್ಥಿಗಳು ತೊಡಗಿಸಿಕೊಳ್ಳಬಹುದು.

3. ಮೂಲಭೂತ ಸೌಲಭ್ಯಗಳು:

ವಿದ್ಯಾರ್ಥಿಗಳಿಗೆ ಹಾಸ್ಟೆಲ್‌ಗಳಲ್ಲಿ ಆಹಾರ, ಬಟ್ಟೆ ಒಣಗಿಸುವ ಯಂತ್ರ ಮತ್ತು ದಿನಸಿ ಪೂರೈಕೆಯನ್ನು ಕಡಿಮೆ ದರದಲ್ಲಿ ಒದಗಿಸಬಹುದು. ಗ್ರಂಥಾಲಯ ಅಥವಾ ಲ್ಯಾಬೊರೇಟರಿಯಲ್ಲಿ ಅಗತ್ಯವಾದ ಉಪಕರಣಗಳು ಮತ್ತು ಸೇವೆಗಳು ಲಭ್ಯವಾಗುತ್ತವೆ.

4. ಹಳೆಯ ಸಂಪತ್ತು ಪುನರುಪಯೋಗ (Recycling and Reuse):

ಕೋ–ಆಪರೇಟಿವ್‌ಗಳಲ್ಲಿ ಹಳೆಯ ಪಠ್ಯಪುಸ್ತಕಗಳು, ಉಪಕರಣಗಳು ಮತ್ತು ಪಠ್ಯ ಸಾಮಗ್ರೀಗಳನ್ನು ಪುನರುಪಯೋಗ ಮಾಡಬಹುದು. ಪರಿಸರ ಸ್ನೇಹಿ ಮತ್ತು ಖರ್ಚು ಕಡಿಮೆ ಮಾಡುವ ಪ್ರಯತ್ನ ಇದರಿಂದ ಸಾಧ್ಯವಾಗುತ್ತದೆ.

5. ಸ್ವಾವಲಂಬನೆ ಮತ್ತು ಸ್ವಾತಂತ್ರ್ಯ:

ವಿದ್ಯಾರ್ಥಿಗಳಿಗೆ ತಮ್ಮ ಸಣ್ಣ ಅಗತ್ಯಗಳನ್ನು ತಾವು ಸ್ವತಃ ನಿರ್ವಹಿಸುವ ಅವಕಾಶವನ್ನು ನೀಡುತ್ತದೆ. ಸ್ವಾಯತ್ತತೆಯನ್ನು ಪ್ರೋತ್ಸಾಹಿಸಿ, ಪ್ರಾಜೆಕ್ಟುಗಳು ಮತ್ತು ಕ್ರಿಯಾಶೀಲತೆಗಾಗಿ ಸಮುದಾಯ–ಆಧಾರಿತ ಬೆಂಬಲ ಒದಗಿಸುತ್ತದೆ.

6. ಸಮಾನತೆ ಮತ್ತು ಸಹಕಾರದ ಮೌಲ್ಯಗಳು:

ಕೋ–ಆಪರೇಟಿವ್‌ಗಳು ಸಮಾನತೆಯನ್ನು ಬೆಂಬಲಿಸುತ್ತವೆ, ಅಂದರೆ ಎಲ್ಲ ಸದಸ್ಯರಿಗೆ ಸಮಾನ ಹಕ್ಕುಗಳು ಮತ್ತು ಲಾಭದ ಹಂಚಿಕೆ. ಈ ಮೂಲಕ ವಿದ್ಯಾರ್ಥಿಗಳಲ್ಲಿ ಸಾಮಾಜಿಕ ನೈತಿಕತೆ, ಸಮಾನತೆ ಮತ್ತು ಸಾಮೂಹಿಕ ಭಾವನೆ ಬೆಳೆಸುತ್ತದೆ.

7. ಉದ್ಯಮಶೀಲತೆ ಮತ್ತು ನಾವೀನ್ಯತೆ:

ಕ್ಯಾಂಪಸ್ ಕೋ–ಆಪರೇಟಿವ್‌ಗಳು ವಿದ್ಯಾರ್ಥಿಗಳಿಗೆ ಹೊಸ ಆವಿಷ್ಕಾರ ಮತ್ತು ಸ್ಮಾರ್ಟ್ ಬಿಸಿನೆಸ್ ಆಯ್ದುಕೊಳ್ಳಲು ಪ್ಲಾಟ್‌ಫಾರ್ಮ್ ಆಗಬಹುದು. ಉದಾಹರಣೆಗೆ: ನವೀಕರಿಸಿದ ತಂತ್ರಜ್ಞಾನಗಳು ಅಥವಾ ಇ–ಕಾಮರ್ಸ್ ಮಾದರಿಯ ಸೇವೆಗಳು.

8. ಸೇವಾ ಸುಧಾರಣೆ:

ಪ್ರತಿದಿನದ ಜೀವನಕ್ಕೆ ಅಗತ್ಯವಾದ ಸೇವೆಗಳು. ಉದಾಹರಣೆಗೆ: ಟೀ ಕ್ಯಾಂಟೀನ್, ಪ್ರಿಂಟಿಂಗ್ ಸೇವೆ ಮತ್ತು ಇಂಟರ್ನೆಟ್ ಸೌಲಭ್ಯಗಳನ್ನು ಕಡಿಮೆ ವೆಚ್ಚದಲ್ಲಿ ಒದಗಿಸುತ್ತದೆ.

9. ಸಮುದಾಯ ಅಭಿವೃದ್ಧಿ:

ಕೋ–ಆಪರೇಟಿವ್‌ಗಳ ಮೂಲಕ ವಿದ್ಯಾರ್ಥಿಗಳು ಪರಸ್ಪರ ಸಹಾಯ ಮಾಡುತ್ತಾ ಸಂಘಟನೆಯ ಮೇಲೆ ನಂಬಿಕೆಯನ್ನು ಬೆಳೆಸುತ್ತಾರೆ. ಇದರಿಂದ ಕ್ಯಾಂಪಸ್‌ನಲ್ಲಿ ಸಮುದಾಯ ಬಾಂಧವ್ಯ, ಜವಾಬ್ದಾರಿ ಮತ್ತು ಆರ್ಥಿಕ ಪ್ರಗತಿ ಉಂಟಾಗುತ್ತದೆ.

ನಿರ್ಣಾಯಕ ಪ್ರಯೋಜನ:

ಕ್ಯಾಂಪಸ್ ಕೋ–ಆಪರೇಟಿವ್ ಒಂದು "ವಿದ್ಯಾರ್ಥಿಗಳಿಂದ ವಿದ್ಯಾರ್ಥಿಗಳಿಗೆ" ಎಂಬ ಧೋರಣೆಯನ್ನು ಅನುಸರಿಸುತ್ತವೆ. ಇದು ಕೇವಲ ಆರ್ಥಿಕ ಪ್ರಯೋಜನವಷ್ಟೇ ಅಲ್ಲ, ಬದಲಿಗೆ ಸಹಕಾರದ, ಜವಾಬ್ದಾರಿಯ ಮತ್ತು ಉದ್ಯೋಗ ನಿರ್ಮಾಣದ ಉತ್ತಮ ಪಾಠ ಶಾಲೆಯಾಗಿ ಪರಿಣಮಿಸುತ್ತದೆ.

7 ಸಹಕಾರಿ ತತ್ವಗಳು

1. ಮುಕ್ತ ಹಾಗೂ ಸ್ವಯಂ ಪ್ರೇರಿತ ಸದಸ್ಯತ್ವ
2. ಪ್ರಜಾಸತ್ತಾತ್ಮಕ ಸದಸ್ಯರ ಹತೋಟಿ
3. ಆರ್ಥಿಕ ಚಟುವಟಿಕೆಗಳ ಸದಸ್ಯರ ಪಾಲು
4. ಸ್ವಾಯತ್ತತೆ ಮತ್ತು ಸ್ವಾತಂತ್ರ್ಯ
5. ಸಹಕಾರ ಶಿಕ್ಷಣ, ತರಬೇತಿ ಮತ್ತು ಪ್ರಚಾರ
6. ಸಹಕಾರಿಗಳಲ್ಲಿ ಪರಸ್ಪರ ಕ್ರಿಯಾತ್ಮಕ ಸಹಕಾರ
7. ಸಾಮಾಜಿಕ ಕಳಕಳಿ

7 Cooperative Principles

1. Voluntary and Open Membership
2. Democratic Member Control
3. Members' Economic Participation
4. Autonomy and Independence
5. Education, Training, and Information
6. Cooperation Among Cooperatives
7. Concern for Community

ಸಹಕಾರಿ ಧ್ವಜದಲ್ಲಿನ 7 ಬಣ್ಣಗಳು

- ಸಹಕಾರ ಬೇಸಾಯ
- ಸಹಕಾರಿ ಉದ್ದಿಮೆ
- ಸಹಕಾರಿ ಮಾರಾಟ
- ಸಹಕಾರಿ ಪತ್ತು ಮತ್ತು ಹಣಕಾಸು
- ಸಹಕಾರಿ ಶಿಕ್ಷಣ ಮತ್ತು ಪ್ರಚಾರ
- ಮಾನವನ ಇತರೆ ಸಹಕಾರಿ ಚಟುವಟಿಕೆಗಳು
- ಸಹಕಾರಿ ಆರೋಗ್ಯ

7 Colors Of Cooperative Flag

- Cooperative Agriculture
- Cooperative Industry
- Cooperative Marketing
- Cooperative Finance & Credit
- Cooperative Education & Publicity
- Cooperative Human Activities
- Cooperative Health

ಧ್ಯೇಯ, ದೃಷ್ಟಿ, ಮೌಲ್ಯಗಳು

ಧ್ಯೇಯ : ಸ್ವಾಯತ್ತತೆ, ಸ್ವಯಂ ಆಡಳಿತ, ಸ್ವಯಂ ನಿಯಂತ್ರಣದ ವೃತ್ತಿಪರ, ಪಾರದರ್ಶಕ ಹಾಗೂ ಉತ್ತರದಾಯಿತ್ವದ ಸೌಹಾರ್ದ ಸಹಕಾರಿ ವ್ಯವಸ್ಥೆಯ ನಿರ್ಮಾಣ

ದೃಷ್ಟಿ : ಸ್ವಾಯತ್ತ, ಸಾಮಾಜಿಕ ಬದ್ಧತೆ, ಸಕಾರಾತ್ಮಕ ಚಿಂತನೆ, ಅಭಿವೃದ್ಧಿಪರ ವಿಶ್ವಮಾದರಿ ಸಹಕಾರಿ ಸಂಸ್ಥೆಯಾಗಿ ಕಾರ್ಯನಿರ್ವಹಿಸುವುದು.

ಮೌಲ್ಯಗಳು : ಜ್ಞಾನ, ಸೇವೆ, ಬದ್ಧತೆ, ಭಾಗವಹಿಸುವಿಕೆ, ಉತ್ತರದಾಯಿತ್ವ.

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು.

'ಸೌಹಾರ್ದ ಸಹಕಾರಿ ಸೌಧ' ನಂ.68, 18ನೇ ಅಡ್ಡ ರಸ್ತೆ, ಮಾರ್ಗೋಸಾ ರಸ್ತೆ,
ಮಲ್ಲೇಶ್ವರಂ, ಬೆಂಗಳೂರು-560055.
www.souharda.coop, Ph: 080-23378375-80, Email:souharda@souharda.coop